# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail:
belagavivarte1@gmail.com

Volume: 01 Issue : 16 SUNDAY 22-03-2026 PRGI No : KNKAN/26/A0962 Pages:4 Rs.2.00 M: 9742418836


## ಕೋರ್ಟ್‌ನಲ್ಲಿ ರಾಜಕೀಯ ಹೋರಾಟಬೇಡ: CM ಸಿದ್ದರಾಮಯ್ಯ ವಿರುದ್ಧ ಬೆದರಿಕೆ ಆರೋಪ, ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ!



ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶದ ಮೇರೆಗೆ ತನ್ನ ಆಸ್ತಿಯನ್ನು ವಶಪಡಿಸಿಕೊಳ್ಳಲು ಬೆದರಿಕೆಗಳು ಬರುತ್ತಿವೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಶುಕ್ರವಾರ ನಡೆದ ವಿಚಾರಣೆಯ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್, ನ್ಯಾಯಾಲಯದಲ್ಲಿ ತನ್ನ ಪ್ರಕರಣವನ್ನು ಹೋರಾಡದಂತೆ ಹೇಳಿದೆ. ಬದಲಿಗೆ ಪ್ರಕರಣವನ್ನು ಹೈಕೋರ್ಟ್‌ಗೆ ಕೊಂಡೊಯ್ಯುವಂತೆ ಸಲಹೆ ನೀಡಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಪ್ರಕರಣವನ್ನು ವಜಾಗೊಳಿಸಿತು. ಇದು ಅರ್ಜಿದಾರರು ಕರ್ನಾಟಕ ಹೈಕೋರ್ಟ್ ಅನ್ನು ಸಂಪರ್ಕಿಸುವ ಆಯ್ಕೆಯನ್ನು ಮುಕ್ತಗೊಳಿಸಿದೆ. ರಾಜ್ಯಕ್ಕೆ ಪ್ರವೇಶಿಸುವಾಗ ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅರ್ಜಿದಾರರು ಆದೇಶ ನೀಡುವಂತೆ ಕೋರಿದ್ದು ಅದಕ್ಕೆ ಕೋರ್ಟ್ ಅರ್ಜಿಯನ್ನು ಇ-ಫೈಲಿಂಗ್ ಮಾಡುವ ಆಯ್ಕೆಯೂ ಲಭ್ಯವಿದೆ ಎಂದು ನ್ಯಾಯಮೂರ್ತಿ ಮೆಹ್ತಾಗೆ ತಿಳಿಸಿದರು.

ಅರ್ಜಿದಾರರು ಪರ ವಕೀಲರು, ನನಗೆ ಬೆದರಿಕೆ ಬರುತ್ತಿದೆ. ನಾನು ಕರ್ನಾಟಕಕ್ಕೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ನನ್ನ ಭದ್ರತೆಗೆ ಧಕ್ಕೆ ತರಲಾಗುತ್ತಿದೆ. ನಾನು ದೆಹಲಿಯಲ್ಲಿ ವಾಸಿಸುವಂತೆ ಒತ್ತಾಯಿಸಲ್ಪಡುತ್ತಿದ್ದೇನೆ. ನನಗೆ ಪದೇ ಪದೇ ಬೆದರಿಕೆ ಬರುತ್ತಿದೆ ಎಂದು ಹೇಳಿದರು. ಅವರು ಕರ್ನಾಟಕದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ವಾಸಿಸಲು ಬಯಸುತ್ತಾರೆ. ಆದರೆ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಾದಿಸಿದರು.

ಇದನ್ನು ಕೋರ್ಟ್ ಪ್ರಶ್ನಿಸಿದಾಗ ವಕೀಲರು, ದೆಹಲಿಯಲ್ಲಿ ಅಲ್ಲ. ಕರ್ನಾಟಕದಲ್ಲಿ. ನಾನು ಹಿಂತಿರುಗಿ ನನ್ನ ವಸತಿ ಆಸ್ತಿಯಲ್ಲಿ ವಾಸಿಸಲು ಬಯಸುತ್ತೇನೆ. ನಾನು ಹಲವಾರು ಪೊಲೀಸ್ ದೂರುಗಳನ್ನು ದಾಖಲಿಸಿದ್ದೇನೆ. ನನ್ನ ಪರವಾಗಿ ನ್ಯಾಯಾಲಯದ ಆದೇಶಗಳನ್ನು ಸಹ ಪಡೆದಿದ್ದೇನೆ. ಇದರ ಹೊರತಾಗಿಯೂ, ಬೆದರಿಕೆಗಳು ಮುಂದುವರೆದವು. ಜನವರಿಯಲ್ಲಿ, ಪರಿಸ್ಥಿತಿಯು ನನ್ನ ಮನೆಯ ಮೇಲೆ ಕಲ್ಲು ತೂರಾಟ ನಡೆಸುವ ಹಂತಕ್ಕೆ ಹೋಯಿತು. ಗೂಂಡಾಗಳು ಮನೆಗೆ ನುಗ್ಗಿದರು... ಅವರು ನನ್ನ ಆಸ್ತಿಯನ್ನು ಧ್ವಂಸ ಮಾಡಿದರು. ಹಾನಿಗೊಳಿಸಿದರು ಮತ್ತು ಲೂಟಿ ಮಾಡಿದರು. ಅವರು ನನ್ನ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಬಯಸುತ್ತಾರೆ ಎಂದು ಆರೋಪಿಸಿದರು.

## ಉಪಚುನಾವಣೆಗೆ: ಅಭ್ಯರ್ಥಿ ಆಯ್ಕೆಗೆ ಕೈ-ಬಿಜೆಪಿ ಕಸರತ್ತು

ಬೆಂಗಳೂರು: ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ನಿಗದಿಯಾಗುತ್ತಿದ್ದಂತೆ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿಪಕ್ಷ ಬಿಜೆಪಿಯಲ್ಲಿ ಚಟುವಟಿಕೆಗಳು ಗರಿಗೆದರಿದ್ದು, ಅಭ್ಯರ್ಥಿಗಳ ಆಯ್ಕೆ ಸಂಬಂಧ ಎರಡು ಪಕ್ಷಗಳಲ್ಲಿ ಸಮಾಲೋಚನೆಗಳು ನಡೆದಿವೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಅಭ್ಯರ್ಥಿ ಆಯ್ಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಸೌಧದ ತಮ್ಮ ಕಚೇರಿಯಲ್ಲಿಂದು ಮಾಜಿ ಸಚಿವ ದಿ. ಹೆಚ್.ವೈ. ಮೇಟಿರವರ ಪುತ್ರ ಹಾಗೂ ಪುತ್ರಿಯರ ಜತೆ ಸಮಾಲೋಚನೆ ನಡೆಸಿದರು.

ಈ ಉಪಚುನಾವಣೆಯಲ್ಲಿ ತಮಗೆ ಟಿಕೆಟ್ ನೀಡಬೇಕೆಂದು ಮೇಟಿ ಕುಟುಂಬ ಪಟ್ಟು ಹಿಡಿದಿದ್ದು, ಒಂದು ವೇಳೆ ಕಾಂಗ್ರೆಸ್ ಪಕ್ಷ ತಮಗೆ ಟಿಕೆಟ್ ನೀಡದಿದ್ದರೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಾಗಿ ಹೆಚ್.ವೈ. ಮೇಟಿ ರವರ ಪುತ್ರಿ ಮಹದೇವಿ ಮೇಟಿ ಹೇಳಿದ್ದರು.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂದು



ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಿ. ಎಚ್.ವೈ. ಮೇಟಿ ಅವರ ಪುತ್ರರಾದ ಮಲ್ಲಿಕಾರ್ಜುನ, ಉಮೇಶ್, ಪುತ್ರಿಯರಾದ ಬಾಯಕ್ಕ ಮತ್ತು ಮಹಾದೇವಿ ಅವರೊಂದಿಗೆ ಇಂದು ಚರ್ಚೆ ನಡೆಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಮಾಜಿ ಸಚಿವ ದಿ. ಹೆಚ್.ವೈ. ಮೇಟಿಯವರ ಪುತ್ರರಾದ ಮಲ್ಲಿಕಾರ್ಜುನ ಮೇಟಿ, ಉಮೇಶ್ ಮೇಟಿ ಹಾಗೂ ಪುತ್ರಿಯರಾದ ಮಹದೇವಿ ಮೇಟಿ, ಬಾಯಕ್ಕ ಮೇಟಿ ರವರೊಂದಿಗೆ ಚರ್ಚೆ ನಡೆಸಿದರು.

ಬಾಗಲಕೋಟೆಯಲ್ಲಿ ಯಾರನ್ನು ಅಭ್ಯರ್ಥಿಯನ್ನಾಗಿಸಬೇಕು ಎಂಬ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಹೈಕಮಾಂಡ್ ತೀರ್ಮಾನಿಸುವ ಅಭ್ಯರ್ಥಿಗೆ ನೀವೆಲ್ಲರೂ ಬೆಂಬಲ ನೀಡಬೇಕು. ಅವರ ಪರವಾಗಿ ನೀವೆಲ್ಲರೂ ಕೆಲಸ ಮಾಡಬೇಕು ಎಂದು ಮೇಟಿ ಕುಟುಂಬಸ್ಥರಿಗೆ ಸೂಚನೆ ನೀಡಿದರು ಎಂದು ಹೇಳಲಾಗಿದೆ.

ಬಾಗಲಕೋಟೆಯಲ್ಲಿ ಯಾರನ್ನು ಅಭ್ಯರ್ಥಿಯನ್ನಾಗಿಸಿದರೆ ಗೆಲುವು ಸಾಧ್ಯವಾಗುತ್ತದೆ ಎಂಬುದರ ಮೇಲೆ ಅಭ್ಯರ್ಥಿಯನ್ನು ಹೈಕಮಾಂಡ್ ಆಯ್ಕೆ ಮಾಡುತ್ತದೆ. ಯಾರೇ ಅಭ್ಯರ್ಥಿಯಾಗಲೀ ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಎಂದು ಮುಖ್ಯಮಂತ್ರಿಗಳು ಹೇಳಿದರು ಎನ್ನಲಾಗಿದೆ.

## ಅಖಂಡ ಭಾರತದ ಮೌಲ್ಯಗಳನ್ನು ಬೆಳಸುವಲ್ಲಿ ಎನ್.ಎಸ್.ಎಸ್.ಸಹಕಾರಿಯಾಗಿದೆ: ಪಿಡಿಓ ಸವಿತಾ ಪಾಟೀಲ



ಮೂಡಲಗಿ: ಇಟ್ನಾಳ ಗ್ರಾಮದಲ್ಲಿ ಹಮ್ಮಿಕೊಂಡಿದ ಮೂಡಲಗಿಯ ಆರ್. ಡಿ. ಎಸ್, ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ಎನ್. ಎಸ್. ಎಸ್. ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾದು ಮಾರಾಪೂರ ಅವರನ್ನು ಸತ್ಕರಿಸಲಾಯಿತು.

**ಬೆಳಗಾವಿ ವಾರ್ತೆ**

**ಮೂಡಲಗಿ:** ಅಖಂಡ ಭಾರತದ ಮೌಲ್ಯಗಳನ್ನು ಬೆಳಸುವಲ್ಲಿ ಎನ್.ಎಸ್.ಎಸ್. ಸಹಕಾರಿಯಾಗಿದೆ. ಇಂದಿನ ದಿನಗಳಲ್ಲಿ ಯಾಂತ್ರಿಕ ಮತ್ತು ತಾಂತ್ರಿಕ ಜೀವನ ಹೆಚ್ಚಾಗಿ ರೂಪಗೊಳ್ಳುತ್ತಿದ್ದು ಇದರಿಂದ ನಮ್ಮ ಸಾಮಾಜಿಕ ಜೀವನದ ಮೌಲ್ಯಗಳು ಕಡಿಮೆಯಾಗುತ್ತಿದ್ದು ಇಂದಿನ ಯುವಕರಲ್ಲಿ ಸಾಮಾಜಿಕ, ನಾಗರಿಕ, ಸಾಂಪ್ರದಾಯಿಕ ಮೌಲ್ಯಗಳನ್ನು ಬೆಳಸುವಲ್ಲಿ ಎನ್.ಎಸ್.ಎಸ್. ನಂತಹ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿಗಳು ತೊಡಗಿದಾಗ ಮಾತ್ರ ಸಾಮಾಜಿಕ ಮೌಲ್ಯಗಳು ಬೆಳದು ಭಾರತದ ಪ್ರಾಬಲ್ಯತೆ ಹೆಚ್ಚುತ್ತದೆ ಎಂದು ಇಟ್ನಾಳದ ಪಿಡಿಓ ಸವಿತಾ ಪಾಟೀಲ ಹೇಳಿದರು.

ಸಮೀಪದ ಇಟ್ನಾಳ ಗ್ರಾಮದ ಮಾದವಾನಂದ ದೇವಸ್ಥಾನದಲ್ಲಿ ಮೂಡಲಗಿಯ ಆರ್. ಡಿ. ಎಸ್, ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಎನ್. ಎಸ್. ಎಸ್. ಶಿಬಿರದ ಸಮಾರೋಪ ಸಮಾರಂಭ'ದಲ್ಲಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಗುಂಪು ಜೀವನ, ಸಾಮಾಜಿಕ ಜೀವನದ ಅರಿವು ಹಲವಾರು ವೃತ್ತಿಗಳ ತಿಳವಳಿಕೆ ಗ್ರಾಮೀಣ ಜನರ ಬದುಕು ಅರ್ಥಮಾಡಿಕೊಳ್ಳುವಲ್ಲಿ ಎನ್.ಎಸ್.ಎಸ್. ಘಟಕಗಳು ಮಹತ್ವದ ಪಾತ್ರ ವಹಿಸುತ್ತೇವೆ ಎನ್.ಎಸ್.ಎಸ್. ಶಿಬಿರದಲ್ಲಿ ಪಾಲ್ಗೊಂಡಾಗ ಸಾಮಾಜಿಕ ಚಿಂತನೆಯ ಕೌಶಲ್ಯಗಳು ಬೆಳದು ಬರಲು ಸಹಾಯಕವಾಗಿದೆ ಎಂದರು.

ಕಾಲೇಜಿನ ಎಫ್.ಡಿ.ಸಿ ಸುಭಾಸ ಮಾಲೋಜಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಎನ್.ಎಸ್.ಎಸ್. ಶಿಬಿರಗಳು ಸಮಾಜದ ಬಗ್ಗೆ ಕಾಳಜಿ ನಾಯಕತ್ವದ ಜವಾಬ್ದಾರಿ ಜೊತೆಗೆ ಗ್ರಾಮಗಳ ಸ್ವಚ್ಛತೆಯ ಮಹತ್ವ ಹಾಗೂ ನಮ್ಮ ಹಳ್ಳಿಗಳಲ್ಲಿ ಇರುವ ಧಾರ್ಮಿಕ ಕೇಂದ್ರಗಳ ಕಾರ್ಯವೈಖರಿಯು ಪರಿಚಯವಾಗುತ್ತದೆ ಎಂದರು.

ಕಾಲೇಜು ಪ್ರಾಚಾರ್ಯ ಸತ್ಯೆಪ್ಪಾ ಗೋಟೂರೆ ಮಾತನಾಡಿ ಎನ್.ಎಸ್.ಎಸ್. ಶಿಬಿರಗಳಲ್ಲಿ ಭಾಗವಹಿಸುವದರಿಂದ ನಿಜವಾದ ಬದುಕಿನ ಮೌಲ್ಯಗಳನ್ನು ಪುಸ್ತಕೀಯ ವಿಷಯಗಳಿಗಿಂತಲ್ಲೂ ಪ್ರಾಯೋಗಿಕವಾಗಿ ಅನುಭವಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ಮಾದು ಮಾರಾಪೂರ, ಕಲಾವತಿ ಹಾಲಳ್ಳಿ, ನಾರಾಯಣ ಸುರಾಣಿ, ಬಸವರಾಜ ಮುತ್ನಾಳ ಬಿ.ಆರ್. ಒಡೆಯರ, ಯು.ಎ.ಮಗದುಮ್ಮ ಉಪನ್ಯಾಸಕರಾದ ಕಿರಣ ಪಟ್ಟಣಶೆಟ್ಟಿ ಸುನೀಲ ಸತ್ತಿ, ಕವಿತಾ ಮುಳಲಿ, ಅಕ್ಷತಾ ಹೊಸಮನಿ, ಎನ್.ಎಸ್.ಎಸ್. ಘಟಕಾಧಿಕಾರಿ ರಾಜು ಪತ್ತಾರ ಮತ್ತಿತ್ತರರು ಉಪಸ್ಥಿತರಿದ್ದರು.

ಜ್ಯೋತಿ ಗರಗದ ನಿರೂಪಿಸಿದರು ಸೌಬಾಗ್ಯ ಸಾಯನ್ನವರ ಸ್ವಾಗತಿಸಿದರು. ಸುಶ್ಮೀತಾ ತುಪ್ಪದ ವಂದಿಸಿದರು.

## ಯುಗಾದಿ ಪ್ರಕೃತಿ ಹಾಗೂ ಸಂಸ್ಕೃತಿಯ ಪ್ರತೀಕ : ಗಿರೆಣ್ಣವರ



ಮೂಡಲಗಿ: ತುಕ್ಕಾನಟ್ಟಿಯ ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಉನ್ನತೀಕರಿಸಿದ ಪ್ರೌಢಶಾಲೆಯಲ್ಲಿ ನಡೆದ ಯುಗಾದಿ ಹಬ್ಬದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬೇವು ಬೆಲ್ಲ ಹಂಚುವದರೊಂದಿಗೆ ಸಿಹಿ ಲಾಡು ಕೂಡ ವಿದ್ಯಾರ್ಥಿಗಳಿಗೆ ಹಂಚಿದರು.

**ಬೆಳಗಾವಿ ವಾರ್ತೆ**

**ಮೂಡಲಗಿ:** ನಾಡಿನ ಹಬ್ಬಗಳು, ಅಚರಣೆಗಳು, ನಮ್ ಸಂಸ್ಕೃತಿ ಸಂಸ್ಕಾರದ ಪ್ರತೀಕಗಳಾಗಿವೆ. ಅದರಲ್ಲೂ ಯುಗಾದಿ ಹಬ್ಬ ನೈಸರ್ಗಿಕ ಬದಲಾವಣೆಗಳೊಂದಿಗೆ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಹಬ್ಬವಾಗಿದೆ ಎಂದು ಪ್ರಧಾನ ಗುರುಗಳಾದ ಎ.ವ್ಹಿ ಗಿರೆಣ್ಣವರ ಹೇಳಿದರು.

ಅವರು ತುಕ್ಕಾನಟ್ಟಿಯ ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಉನ್ನತೀಕರಿಸಿದ ಪ್ರೌಢಶಾಲೆಯಲ್ಲಿ ನಡೆದ ಯುಗಾದಿ ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಮ್ಮ ಹಿರಿಯರು ಆಚರಿಸಿಕೊಂಡು ಹಾಗೂ ನಂಬಿಕೊಂಡು ಬಂದಿರುವ ಹಬ್ಬ ಹರಿದಿನಗಳು ಕೇವಲ ಸಂಸ್ಕಾರ ಸಂಸ್ಕೃತಿಗಳಾಗಿರದೇ ವೈಜ್ಞಾನಿಕ ಹಿನ್ನೆಲೆಯನ್ನು ಕೂಡ ಹೊಂದಿವೆ. ಹೀಗಿರುವಾಗ ನಮ್ಮ ಪೂರ್ವಿಕರು ಆಚರಿಕೊಂಡು ಹಾಗೂ ಅನುಸರಿಸಿಕೊಂಡು ಬಂದಿರುವ ಹಬ್ಬಗಳು, ಆಚಾರಗಳು ಇವುಗಳನ್ನು ಆಚರಿಸುವದರ ಜೊತೆಗೆ ಇಂದಿನ ವಿದ್ಯಾರ್ಥಿಗಳಿಗೆ ಅರ್ಥೈಸಿ ಕೊಡಬೇಕಾಗಿದೆ. ವಿದ್ಯಾರ್ಥಿಗಳಿಗೆ ಪಾಠ ಭೋಧನೆಯೊಂದಿಗೆ ಇಂತಹ ನಾಡು ನುಡಿ ಹಬ್ಬ ಹರಿದಿನಗಳ ಭಾವೈಕ್ಯತೆಯ ಬಗ್ಗೆ ತಿಳಿ ಹೇಳಬೇಕಾಗಿದೆ. ಶಾಲೆಯಲ್ಲಿ ಪ್ರತಿಯೊಂದು ಹಬ್ಬದ ಬಗ್ಗೆ ಆಚರಣೆ ಮಾಡಿ ಅರಿವು ಮೂಡಿಸಿ ಸಿಹಿ ಬೋಜನವನ್ನು ನೀಡಲಾಗುತ್ತದೆ ಎಂದರು.

ಈ ಸಂಧರ್ಭದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಬೇವು ಬೆಲ್ಲ ಹಂಚುವದರೊಂದಿಗೆ ಸಿಹಿ ಲಾಡು ಕೂಡ ವಿದ್ಯಾರ್ಥಿಗಳಿಗೆ ಹಂಚಿ ಪರಸ್ಪರ ವಿದ್ಯಾರ್ಥಿಗಳು ಗುರುಬಳಗ ಶುಭಾಶಯ ವಿನಿಮಯ ಮಾಡಿಕೊಂಡರು. ಇದೇ ಸಂದರ್ಭದಲ್ಲಿ ಯುಗಾದಿ ಹಬ್ಬದ ಮಹತ್ವ ಸಾರುವ ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ವಿಮಲಾಕ್ಷಿ ತೋರಗಲ, ಪುಷ್ಪಾ ಭರಮದೇ, ಲಕ್ಷ್ಮೀ ಹೆಬ್ಬಾಳ, ಸುಜಾತಾ ಕೋಳಿ, ಎಮ್.ಎಲ್ ಖಾನಗೌಡ್ರ, ಮಹಾದೇವ ಗೋಮಾಡಿ, ಪ್ರೌಢ ವಿಭಾಗದ ಜ್ಯೋತಿಲಕ್ಷ್ಮೀ, ಸಾವಿತ್ರಿ ಗಂಟಿ, ತಾಯವ್ವಾ ಮುದ್ದಾಪೂರ, ಅತಿಥಿ ಶಿಕ್ಷಕರಾದ ಹೊಳೆಪ್ಪಾ ಗದಾಡಿ, ಬಸವರಾಜ ನಾಂವಿ, ಶಿವಲೀಲಾ ಹಣಮನ್ನವರ, ಯಮುನಾ ಹಮ್ಮನವರ, ಅನ್ನಪೂರ್ಣಾ ಹುಲಕುಂದ, ಪವಿತ್ರಾ ಬಡಿಗೇರ, ಖಾತೂನ ನದಾಫ ಪಾಲ್ಗೊಂಡಿದ್ದರು.

## ಆನೆಕಲ್ಲು ಮಳೆಗೆ ಒಣದ್ರಾಕ್ಷಿ ಹಾನಿ: ಚಿದಾನಂದ ಸವದಿ ಭೇಟಿ

**ಬೆಳಗಾವಿ ವಾರ್ತೆ**

ಅಥಣಿ: ತಾಲೂಕಿನ ದೇಸಾಯರಟ್ಟಿ ಗ್ರಾಮದಲ್ಲಿ ಗುರುವಾರ ಸಂಜೆ ಸುರಿದ ಭೀಕರ ಆಲಿಕಲ್ಲು ಮಳೆ ಮತ್ತು ಗಾಳಿಗೆ ರೈತರು ಒಣಗಿಸಲು ಹಾಕಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಒಣದ್ರಾಕ್ಷಿ ಸಂಪೂರ್ಣವಾಗಿ ತೊಯ್ದು ಹಾನಿಯಾಗಿದೆ.

ಗ್ರಾಮದ ರೈತ ಬಸವರಾಜ ಆಜೂರ ಅವರಿಗೆ ಸೇರಿದ ಒಣದ್ರಾಕ್ಷಿ ನಿಟಿಂಗ್ ಘಟಕದ ಆವರಣದಲ್ಲಿ ಒಣಗಲು ಹಾಕಿದ್ದ ದ್ರಾಕ್ಷಿಯು ಮಳೆಗೆ ಆಹುತಿಯಾಗಿದ್ದು, ಅಂದಾಜು 40 ಲಕ್ಷ ರೂಪಾಯಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಕಾಂಗ್ರೆಸ್ ನಾಯಕ ಚಿದಾನಂದ ಸವದಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೈಗೆ ಬಂದ ತುತ್ತು ಬಾಯಿಗೆ ಬರದಂತಾದ ರೈತರ ಸ್ಥಿತಿಯನ್ನು ಕಂಡು ಚಿದಾನಂದ ಸವದಿ ಅವರು ತೀವ್ರ ಕಳವಳ ವ್ಯಕ್ತಪಡಿಸಿದರು. ಸಂಕಷ್ಟದಲ್ಲಿರುವ ರೈತರನ್ನು ಧೈರ್ಯ ತುಂಬಿದ ಅವರು, ತಂದೆಯವರಿಗೆ ಮಾಹಿತಿ ನೀಡಿ ಸರ್ಕಾರದ ಮಟ್ಟದಲ್ಲಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು. ಈ ವೇಳೆ ಚಿದಾನಂದ ಸವದಿ ಮಾತ ನಾಡಿ "ಪ್ರಕೃತಿ ವಿಕೋಪದಿಂದ ರೈತರು ಇಷ್ಟೊಂದು ದೊಡ್ಡ ಪ್ರಮಾಣದ ಹಾನಿ ಗೊಳಗಾಗಿರುವುದು ಮನಸ್ಸಿಗೆ ತುಂಬಾ ಬೇಸರ ತಂದಿದೆ. ಶಾಸಕರಾದ ಲಕ್ಷ್ಮಣ ಸವದಿ ಅವರು ಪ್ರಸ್ತುತ ಊರಿನಲ್ಲಿ ಇಲ್ಲದ ಕಾರಣ, ಅವರ ಪರವಾಗಿ ನಾನು ಭೇಟಿ ನೀಡಿದ್ದೇನೆ. ಆಗಿರುವ ಹಾನಿಯ ಬಗ್ಗೆ ತಂದೆಯವರಿಗೆ ದೂರವಾಣಿ ಮೂಲಕ ಸಂಪೂರ್ಣ ಮಾಹಿತಿ ನೀಡುತ್ತೇನೆ," ಎಂದು ಹೇಳಿದರು. ಈ ಸಮಯದಲ್ಲಿ ಗ್ರಾಮದ ಪ್ರಮುಖರು, ರೈತ ಮುಖಂಡರು& ಕಾಂಗ್ರೆಸ್ ಕಾರ್ಯಕರ್ತರು ಇದ್ದರು.



## LLMದಲ್ಲಿ ಗೋಲ್ಡ್ ಮೆಡಲ್ ಸಮೇತ ರಾಜ್ಯಕ್ಕೆ ಫಸ್ಟ್ ರ್‍ಯಾಂಕ್ ಗಳಿಸಿದ ಸಹನಾ ಕಾರ್ಕಳರಿಗೆ ಕರ್ನಾಟಕ ಉತ್ತರ ಆರ್.ಎಸ್.ಎಸ್.ದಿಂದ ಸನ್ಮಾನ



ಗದಗ : ಐ.ಐಒದಲ್ಲಿ ಗೋಲ್ಡ್ ಮೆಡಲ್ ಸಮೇತ ರಾಜ್ಯಕ್ಕೆ ಫಸ್ಟ್ ರ್‍ಯಾಂಕ್ ಗಳಿಸಿದ ಸಹನಾ ಎ. ಕಾರ್ಕಳ ಅವರಿಗೆ ಕರ್ನಾಟಕ ಉತ್ತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಾಮರಸ್ಯ ವೇದಿಯ (ಆರ್.ಎಸ್.ಎಸ್.) ಪದಾಧಿಕಾರಿಗಳು ಸಾಧನೆಯನ್ನು ಪ್ರಶಂಸಿ ಸನ್ಮಾನಿಸಿ ಗೌರವಿಸಿ ಶುಭ ಕೋರಿದರು.

ಸಹನಾ ಕಾರ್ಕಳ ನಿವಾಸಕ್ಕೆ ಆಗಮಿಸಿದ ಸಾಮರಸ್ಯ ವೇದಿಕೆ ತಂಡ ಆಗಮಿಸಿ ಗೌರವಿಸಿದ ನಂತರ ವಿಡಿಎಸ್ ಟಿಸಿ ಕಾಲೇಜ ಪ್ರಾಚಾರ್ಯರು ಸಂಘದ ಪ್ರಮುಖರಾದ ಮಾರುತಿ ಕಟ್ಟಿಮನಿಯವರು

ಮಾತನಾಡಿ ಸತತ ಅಧ್ಯಯನ, ಉತ್ತಮ ಸಂಸ್ಕಾರ, ಪಾಲಕರ ಪ್ರೋತ್ಸಾಹ ದೊರೆತರೆ ಎಂತಹ ಸಾಧನೆ ಮಾಡಬಹುದು ಎಂಬುದಕ್ಕೆ ಸಹನಾ ಕಾರ್ಕಳ ಸಾಕ್ಷಿಯಾಗಿದ್ದಾರೆ ಎಂದರು.

ಸಾಧನೆ ಯಾರ ಸ್ವತ್ತಲ್ಲ ಆದರೆ ಸಾದಿಸುವ ಸಾಹಸ, ಛಲ ಮತ್ತು ಜಾಣ್ಮೆ ಇರಬೇಕೆಂದ ಮಾರುತಿ ಕಟ್ಟಿಮನಿಯವರು ಬರುವ ಸವಾಲುಗಳನ್ನೆ ಸಾಧನವಾಗಿ ಬಳಸಿಕೊಂಡ್ರೆ ಏನೆಲ್ಲ ಸಾಧನೆ ಮಾಡಬಹುದು ಎಂಬುದಕ್ಕೆ ಸಹನಾ ಕಾರ್ಕಳ ಸ್ಪಷ್ಟ ಎಕ್ಸಾಂಪಲ್ ಎಂದರು.

ಕರ್ನಾಟಕ ಉತ್ತರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಮರಸ್ಯ ವೇದಿಕೆ ಪದಾಧಿಕಾರಿಗಳಾದ ಡಾ.ಉಮೇಶ ಹಾದಿ, ಡಾ.ಪ್ರಕಾಶ ಹೊಸಮನಿ, ರವಿಕಾಂತ ಅಂಗಡಿ, ಪ್ರೊ.ಹನುಮಂತ ಕಾಳೆ ಪ್ರೊ.ಶಶಿಧರ ಕುರಿ, ಡಾ.ಅನಂತ ಎಸ್.ಕಾರ್ಕಳ, ಶ್ರೀಮತಿ ಮಂಗಳಾ ಕಾರ್ಕಳ ಉಪಸ್ಥಿತರಿದ್ದರು.



ಧಾರವಾಡ: ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಇಂದು ಮಧ್ಯಾಹ್ನ ಕಲಘಟಗಿ ತಾಲೂಕಿನ ಬೀರವಳ್ಳಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಗೆ ಅನಿರೀಕ್ಷಿತ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಆರನೇಯ ತರಗತಿ ಮಕ್ಕಳಿಗೆ ಹಿಂದಿ ಪಠ್ಯ ಬೋಧನೆ ಮಾಡಿ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು.

# ಕೆರಿಯರ್ ಮೇಳ–ವೃತ್ತಿ ಮಾರ್ಗದರ್ಶನ ಘಟಕ ಉದ್ಘಾಟನೆ

## ಕೆರಿಯರ್ ಮೇಳದಿಂದ ವಿದ್ಯಾರ್ಥಿಗಳ ಭವಿಷ್ಯ ರೂಪುಗೊಳ್ಳಲಿ : ಸಿ.ಎನ್.ಶ್ರೀಧರ



ಗದಗ: ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ವಿದ್ಯಾರ್ಥಿಗಳು ಭವ್ಯ ಭವಿಷ್ಯ ರೂಪಿಸಿಕೊಳ್ಳಲು ಉದ್ಯೋಗಕ್ಕಾಗಿ ಓದುವದು ಅವಶ್ಯವಾಗಿದೆ. ವೃತ್ತಿ ಮಾರ್ಗದರ್ಶನ ಪಡೆದಿರುವ ವ್ಯಕ್ತಿಗೆ ಈ ದಾರಿ ಸುಗಮಗೊಳ್ಳುವದು, ಅಂತಹ ಸುಂದರ ಭವಿಷ್ಯವನ್ನು ಸುಗಮಗೊಳಿಸಲು ಈ ಕೆರಿಯರ್ ಮೇಳ ಪೂರಕವಾಗಲಿ ಎಂದು ಗದಗ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಹೇಳಿದರು.

ಡಯಟ್ ಆವರಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ, ಗದಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ (ಮಾ.20) ಜರುಗಿದ 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಎರ್ಪಡಿಸಲಾಗಿದ್ದ ಕೆರಿಯರ್ ಮೇಳ–2026 ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮುಂದಿನ ಜೀವನ ರೂಪಿಸಿಕೊಳ್ಳಲು ವೃತ್ತಿ ಮಾರ್ಗದರ್ಶನ ಘಟಕವನ್ನು ರಾಜ್ಯದ ಎಲ್ಲ ಜಿಲ್ಲೆಯ ಡಯಟ್‌ಗಳಲ್ಲಿ ತೆರೆಯುವ ಸರ್ಕಾರ ಆದೇಶ ನೀಡಿದ್ದು ಅದರರನ್ವಯ ಗದುಗಿನಲ್ಲಿಯೂ ಈ ಘಟಕವನ್ನು ಇಂದು ಅಧಿಕೃತವಾಗಿ ಪ್ರಾರಂಭಿಸಲಾಗಿದೆ. ಜಿಲ್ಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಘಟಕದಲ್ಲಿರುವ ವಿಷಯ ತಜ್ಞರೊಂದಿಗೆ ಸಮಾಲೋಚಿಸಿ ಮಾರ್ಗದರ್ಶನ ಪಡೆದುಕೊಳ್ಳಬೇಕು, ಜೊತೆಗೆ ವೃತ್ತಿ ಮಾರ್ಗದರ್ಶನಕ್ಕೆ ಪೂರಕವಾದ ಅತ್ಯಮೂಲ್ಯ ಗ್ರಂಥಗಳು, ಉನ್ನತ ಕೋರ್ಸಗಳ ವ್ಯಾಸಂಗಕ್ಕೆ ಅಗತ್ಯ ಪುಸ್ತಕಗಳಿದ್ದು ವಿದ್ಯಾರ್ಥಿಗಳು ಅಧ್ಯಯನ ಮಾಡಬಹುದು, ಕಂಪ್ಯೂಟರ್ ಇಂಟರ್‌ನೆಟ್ ಸೌಲಭ್ಯವೂ ಇದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಹೇಳಿದರು.

ವಿದೇಶಗಳಲ್ಲಿ ವ್ಯಾಸಂಗ ಮಾಡುವದಕ್ಕೂ ಭಾರತದಲ್ಲಿ ಮಾಡುವುದಕ್ಕೂ ಇಂದಿನ ದಿನಗಳಲ್ಲಿ ಬಹಳ ವ್ಯತ್ಯಾಸವಿಲ್ಲ ವಿದೇಶಗಳಲ್ಲಿ ದೊರಕುವಂತಹ ಎಲ್ಲ ರೀತಿಯ ಸಂಪನ್ಮೂಲಗಳು, ವಿಷಯ ತಜ್ಞರು ಭಾರತದಲ್ಲಿಯೂ ಸಹ ಇದ್ದು ಕಲಿಕಾ ಸಾಮಗ್ರಿ, ಮಾಹಿತಿ ಮತ್ತು ತಂತ್ರಜ್ಞಾನ ಹಾಗೂ ಸಾಧಿಸಬೇಕೆಂಬ ಛಲದೊಂದಿಗೆ ಉನ್ನತ ಅಧ್ಯಯನ, ಉನ್ನತ ಸಾಧನೆ ಮಾಡಬಹುದಾಗಿದೆ ಎಂದರು.

9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳು ವೃತ್ತಿ ಮಾರ್ಗದರ್ಶನ ಪಡೆದುಕೊಂಡಿದ್ದರೆ ಅರ್ಧ ದಾರಿ ಕ್ರಮಿಸಿದಂತೆ ಉಳಿದಿರುವದು ಪಿಯುಸಿ ನಂತರ ಅವಕಾಶಗಳು ಹೆರಳವಾಗಿದ್ದು ಸಾಧನೆಯ ಸೂಕ್ತ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಅವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕ (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರಾದ ಜಿ.ಎಂ.ಮುಂದಿನಮನಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ವೃತ್ತಿ ಬಗ್ಗೆ ಅರಿತುಕೊಳ್ಳಲು ಹಾಗೂ ಭವಿಷ್ಯ ರೂಪಿಸಿಕೊಳ್ಳಲು ಈ ಕೆರಿಯರ್ ಮೇಳಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಜಿಲ್ಲೆಯ 865 ವಿದ್ಯಾರ್ಥಿಗಳು ಮೇಳದಲ್ಲಿ ಪಾಲ್ಗೊಂಡು ಮಾಹಿತಿಯನ್ನು ಪಡೆದುಕೊಂಡಿದ್ದು ಈ ಮಾಹಿತಿ ಅವರ ಭವಿಷ್ಯವನ್ನು ರೂಪಿಸುವಂತಾಗಲಿ ಎಂದರು.

ಹಾವೇರಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಡಾ.ಬಿ.ಎಂ. ಬೇವಿನಮರದ ಅವರು ಎಸ್.ಎಸ್.ಎಲ್.ಸಿ/ ಪಿಯುಸಿ ನಂತರ ವೃತ್ತಿ ಅವಕಾಶಗಳು ಕುರಿತು ಉಪನ್ಯಾಸ ನೀಡಿ ನಾವಿಂದು ಭ್ರಮೆಯ ಲೋಕದಲ್ಲಿದ್ದೇವೆ ಬದಲಾಗಿ ವಾಸ್ತವಿಕ ಬದುಕಿಗೆ ಒತ್ತು ನೀಡಬೇಕು. ಇದು ಸ್ಪರ್ಧಾತ್ಮಕ ಯುಗವಾಗಿದ್ದು ಕಲಿಯುವ ಆಸಕ್ತಿ ಸಾಧಿಸುವ ಛಲವಿದ್ದರೆ ಸಾಧನೆ ಸುಗಮಗೊಳ್ಳುವದು. ಸಾಧಿಸಬೇಕೆನ್ನುವ ವಿದ್ಯಾರ್ಥಿಗಳಿಗೆ ಪೋಷಕರ ಸಲಹೆ, ಶಿಕ್ಷಕರ ಮಾರ್ಗದರ್ಶನ ಆಪ್ತ ಸಮಾಲೋಚನೆ ಅಗತ್ಯ ಎಂದರು.

ಇಗ್ನೋದ ವಿಶ್ರಾಂತ ಪ್ರಾದೇಶಿಕ ನಿರ್ದೇಶಕ ಡಾ.ಜಿ.ಎಚ್.ಇಮ್ರಾಪೂರ ಸಿಇಟಿ, ಎನ್‌ಇಇಟಿ, ಜೆಇಇ, ಎನ್‌ಡಿಎ, ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ, ಪರೀಕ್ಷೆ ಎದುರಿಸುವ ಬಗೆಯನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವ್ಹಿ.ವ್ಹಿ.ನಡುವಿನಮನಿ, ಡಯಟ್ ಹಿರಿಯ ಉಪನ್ಯಾಸಕ ಬಿ.ಎಫ್.ಅರವಟಗಿ, ಡಯಟ್ ಉಪನ್ಯಾಸಕ ಕೆ.ವೈ.ವಿಭೂತಿ, ಗದಗ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿಜಯ ಕಿರೇಸೂರ, ಅಧೀಕ್ಷಕರಾದ ಶ್ರೀಮತಿ ಶೈಲಜಾ ತಟ್ಟಿ ಉಪಸ್ಥಿತರಿದ್ದರು. ಡಯಟ್ ಅಧೀಕ್ಷಕ ಶ್ರೀನಿವಾಸ ಕುಲಕರ್ಣಿ ಪ್ರಾರ್ಥಿಸಿದರು, ಉಪನ್ಯಾಸಕರಾದ ಎಚ್.ಬಿ.ರಡ್ಡೇರ ಸ್ವಾಗತಿಸಿದರು, ಯಲ್ಲಪ್ಪ ಹಂದ್ರಾಳ ನಿರೂಪಿಸಿ ಜಿ.ಡಿ.ದಾಸರ ವಂದಿಸಿದರು. ಉಪನ್ಯಾಸಕರಾದ ಶ್ರೀಮತಿ ಕೆ.ಎಸ್.ಹೂಲಗೇರಿ, ಶ್ರೀಮತಿ ಸುಧಾ ಬನಿಕಲ್, ಅಧೀಕ್ಷಕ ಪ್ರಶಾಂತ ಸರ್ವಂದ, ಎಸ್.ಆರ್.ನದಾಫ ಮುಂತಾದವರಿದ್ದರು.

ಗದಗ ಜಿಲ್ಲಾ ಚಿತ್ರಕಲಾ ಶಿಕ್ಷಕರಿಂದ ಚಿತ್ರಪ್ರದರ್ಶನ, ವಿವಿದ ಇಲಾಖೆ ಯೋಜನೆಗಳ ಕುರಿತು ಹಾಗೂ ಶಾಲಾ ವಿದ್ಯಾರ್ಥಿಗಳ ವಿಜ್ಞಾನ ಗಣಿತ ಪ್ರಯೋಗಳ ಮಳಿಗೆ ಜನಮನ ಸೆಳೆದವು.

## ನಾಳೆ ಪ.ಜಾ, ಪ.ಪಂಗಡ ಕುಂದುಕೊರತೆ ಸಭೆ

ಧಾರವಾಡ: ಧಾರವಾಡ ಜಿಲ್ಲಾ ಪೊಲೀಸ ಇಲಾಖೆಯಿಂದ ಮಾರ್ಚ 23,2026 ರಂದು ಧಾರವಾಡ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರ ಸಭೆ ಕರೆಯಲಾಗಿದೆ. ಸಭೆಯಲ್ಲಿ ಸುಮುದಾಯದ ಕುಂದುಕೊರತೆಗಳ ಬಗ್ಗೆ ಚರ್ಚಿಸಲಾಗುತ್ತದೆ.

ಸಭೆಯು ಧಾರವಾಡ ಪೊಲೀಸ್ ಹೆಡ್ ಕ್ವಾರ್ಟರ್ಸ್ ದುರ್ಗಾದೇವಿ ದೇವಸ್ಥಾನದಲ್ಲಿ ಮಾರ್ಚ್ 23, ಬೆಳಿಗ್ಗೆ 11 ಗಂಟೆಗೆ ಜರುಗಲಿದೆ.

ಜಿಲ್ಲೆಯ ಎಲ್ಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರುಗಳು ಸದರಿ ಕುಂದುಕೊರತೆ ಸಭೆಗೆ ಹಾಜರಾಗಬೇಕು ಎಂದು ಧಾರವಾಡ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಮಸ್ಯೆಯೊಂದಿಗೆ ಸಮಾಜಕಾರ್ಯ...

ಸೋಷಿಯಲ್ ವರ್ಕ್ ಎಂದರೆ ಬಹಳಷ್ಟು ಜನರಲ್ಲಿ ಈಗಲೂ ಕೂಡ ತಪ್ಪು ಅಭಿಪ್ರಾಯಗಳಿವೆ. ಹೀಗೆಂದರೆ ಸಮಾಜ ಸೇವೆಯೆಂದು ಪರಿಗಣಿಸುವವರು ಹಲವರಾದರೆ, ಈ ಕೆಲಸ ಮಾಡಲು ಯಾವುದೇ ಪದವಿ ಹಾಗೂ ಓದಿನ ಅಗತ್ಯವಿಲ್ಲ ಎನ್ನುವವರು ಇನ್ನು ಕೆಲವರು. ಆದರೆ ಸಮಾಜ ಕಾರ್ಯವು ಒಂದು ಕೋರ್ಸ್ ಆಗಿ ಅದರ ವ್ಯಾಪ್ತಿ ಇಂದು ಬಹಳ ವಿಸ್ತರಿಸಿದೆ.ಇದಕ್ಕೆ ಬಹಳಷ್ಟು ಕಾರಣಗಳಿವೆ. ಮುಖ್ಯ ಕಾರಣ ಆಧುನಿಕ ಸಮಾಜದಲ್ಲಿ ಮಾನವ ಎದುರಿಸುತ್ತಿರುವ ಮನೋಸಾಮಾಜಿಕ ಸಮಸ್ಯೆಗಳು ಹಾಗೂ ಅದರಲ್ಲಿರುವ ಸಂಕೀರ್ಣತೆಯ ಸವಾಲುಗಳು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿರುವುದು. ಈ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಹಾಗೂ ನೆಮ್ಮದಿಯ ಜೀವನಕ್ಕೆ ನೆಲಗಟ್ಟನ್ನು ಸಿದ್ಧಪಡಿಸುವುದು ಸಾಮಾಜಿಕ ಸೇವಾ ಕಾರ್ಯಕರ್ತರ ಕೆಲಸ. ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಸಮಾಜದ ಯಾವ ಭಾಗದಲ್ಲಿ ಸಮಸ್ಯೆ ಇದೆ ಎಂದು ನಿಖರವಾಗಿ ಹೇಳಬಲ್ಲ ದಿಟ್ಟತನ ಸಾಮಾಜಿಕ ಸೇವಾ ಕಾರ್ಯಕರ್ತರಲ್ಲಿ ಎದ್ದು ಕಾಣುತ್ತಿರುವುದು ಇನ್ನೊಂದು ಕಾರಣ. ಸಮಾಜದ ಒಟ್ಟು ತೊಂದರೆಗೆ ಕಾರಣಗಳನ್ನು ನಿಚ್ಚಳವಾಗಿ ಪಟ್ಟಿ ಮಾಡಿ ಸಮಸ್ಯೆ, ಸವಾಲುಗಳಿಗೆ ಪರಿಹಾರ ನೀಡುವ, ಪರಿಣಾಮವನ್ನು ವಿಶ್ಲೇಷಿಸುವ ಹಲವಾರು ಮಾರ್ಗಗಳಲ್ಲಿ ಆಧುನಿಕ ಸಮಾಜ ಕಾರ್ಯವು ಮುಂಚೂಣಿಯಲ್ಲಿದೆ ಎನ್ನಬಹುದು.

ಮಕ್ಕಳಿಂದ ವೃದ್ಧರವರೆಗೆ ಹಲವಾರು ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಹಾಗೆಯೇ ವಿದ್ಯಾರ್ಥಿ ಜೀವನ, ಸಂವಹನ ಕೌಶಲ, ವಿಷಯದ ಜ್ಞಾನ, ಆಲೋಚನಾ ಪ್ರಕ್ರಿಯೆ, ವೃತ್ತಿ ಜೀವನ, ಕೌಟುಂಬಿಕ ಬದುಕು ಹೀಗೆ ಜೀವನದ ಹಲವಾರು ಘಟ್ಟಗಳಲ್ಲಿ ಸಾಮಾಜಿಕ ಮತ್ತು ಮಾನಸಿಕ ಒತ್ತಡ, ಆರ್ಥಿಕ ತೊಂದರೆಗಳು ಜಾಸ್ತಿಯಾಗುತ್ತಿವೆ. ಈ ಸಂದರ್ಭಗಳಲ್ಲಿ ಸಮಸ್ಯೆಗಳನ್ನು ನಿವಾರಿಸಲು ವ್ಯಕ್ತಿಗತವಾಗಿ, ಸಾಮೂಹಿಕವಾಗಿ, ಸಾಮುದಾಯಿಕವಾಗಿ ನಿಭಾಯಿಸಲು ಆಪ್ತ ಸಮಾಲೋಚನೆ, ಕೇಂದ್ರೀಕೃತ ಗುಂಪು ಚರ್ಚೆಯ ಅಗತ್ಯವಿರುತ್ತದೆ. ಹೀಗಾಗಿ ವೃತ್ತಿಪರ ಸಮಾಜ ಕಾರ್ಯ ಅಧ್ಯಯನ ಮಾಡಿದವರಿಗೆ ಹೆಚ್ಚು ಹೆಚ್ಚು ಅವಕಾಶಗಳು ತೆರೆದಿವೆ.

ಸಮಾಜಕಾರ್ಯ ಸೇವಾ ಕ್ಷೇತ್ರಗಳು...

ಹಲವಾರು ಕ್ಷೇತ್ರಗಳಲ್ಲಿ ಸಮಾಜ ಕಾರ್ಯದ ಅಗತ್ಯವನ್ನು ಕಾಣಬಹುದು. ಉದಾಹರಣೆಗೆ: ಆಸ್ಪತ್ರೆಗಳಲ್ಲಿ,



ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ, ಅಪರಾಧಿಗಳ ಸುಧಾರಣೆ ಮತ್ತು ಪುನರ್ ವಸತಿ ಕಲ್ಪಿಸುವಲ್ಲಿ, ಸಮಾಜ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯ, ಇಂಡಸ್ಟ್ರಿಯಲ್ ಸಮಾಜಕಾರ್ಯ, ಕಾರ್ಪೊರೇಟ್ ವಲಯದಲ್ಲಿ ಬೃಹತ್ ಶಾಖೆಗಳಾಗಿ ಇದು ಬೆಳೆಯುತ್ತಿದೆ.

೨೦ನೇ ಶತಮಾನದಲ್ಲಿ ಉದಯವಾದ ನವ ಜ್ಞಾನ ಶಾಖೆಯಾದ ಸಮಾಜ ಕಾರ್ಯದ ಅಧ್ಯಯನ ಸರ್ಕಾರಿ ಮತ್ತು ಸ್ವಯಂಸೇವಾ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಉದ್ಯೋಗಾವಕಾಶಗಳಿಂದಾಗಿ ವಿದ್ಯಾರ್ಥಿಗಳ ಗಮನವನ್ನು ಸೆಳೆಯುತ್ತಿದೆ.

ನಮ್ಮ ರಾಜ್ಯದಲ್ಲಿ ಸಮಾಜ ಕಾರ್ಯ ಅಧ್ಯಯನ ಪಿ.ಯು.ಸಿ. ನಂತರದ ಮೂರು ವರ್ಷಗಳ ಬ್ಯಾಚುಲರ್ ಆಫ್ ಸೋಷಿಯಲ್ ವರ್ಕ್ ಪದವಿ ಕೆಲವು ಕಾಲೇಜುಗಳಲ್ಲಿ ಲಭ್ಯವಿದೆ.ವಿಶ್ವವಿದ್ಯಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಲ್ಲಿ ಸ್ನಾತಕೋತ್ತರ ವಿಷಯವಾಗಿ ಸಮಾಜಕಾರ್ಯ ಅಧ್ಯಯನದ ವಿಷಯವಿದೆ. ಬಳ್ಳಾರಿಗೆ ವಿಶ್ವವಿದ್ಯಾಲಯದಲ್ಲಿ ಕಲಾ ವಾಣಿಜ್ಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು (ಊಜುಟ ಜುಙಜ್ಞಿಣಾಜು) ಸಮಾಜ ಕಾರ್ಯವನ್ನು ತೆಗೆದುಕೊಂಡು ಹೋಗಬಹುದಾಗಿದೆ ಅದು ಐಚ್ಛಿಕ ವಿಷಯವಾದರೆ ಇನ್ನೂ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು. ಇದು ಕಲಾ ವಿಭಾಗದಲ್ಲಿಯೇ ಅತ್ಯಂತ ವಿಶಿಷ್ಟವಾದ ಮತ್ತು ಆಸಕ್ತಿದಾಯಕ ಕೋರ್ಸ್. ಪದವಿಯಲ್ಲಿ ಯಾವುದೇ ವಿಷಯ ಓದಿದರೂ ಸ್ನಾತಕೋತ್ತರ ಸಮಾಜ ಕಾರ್ಯ ವ್ಯಾಸಂಗಕ್ಕೆ ಸೇರಿಕೊಳ್ಳಬಹುದು. ಜೊತೆಗೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಮಾಜ ಕಾರ್ಯ ಅಧ್ಯಯನ ವಿಭಾಗ ಲ ಲಭ್ಯವಿದೆ..

ಕ್ಷೇತ್ರ ಅಧ್ಯಯನಕ್ಕೆ ಒತ್ತು

ಸಮಾಜ ಕಾರ್ಯ ಅಧ್ಯಯನವು ಅತ್ಯಂತ ಆಸಕ್ತಿದಾಯಕವಾದ ವಿಷಯ. ಮನುಷ್ಯ ಜೀವನದ ಬೇರೆ ಬೇರೆ ಅಂಶಗಳು, ಸಮಾಜದಲ್ಲಿನ ಸಮೂಹ ಬದುಕು, ವ್ಯಕ್ತಿತ್ವ ಇತ್ಯಾದಿಗಳ ಕಾರಣದಿಂದ ವಿಧ್ಯಾರ್ಥಿಗೆ ಪ್ರತೀ ಕ್ಷಣವೂ ಕಲಿಕೆಯು ಕುತೂಹಲವನ್ನು ಹುಟ್ಟಿಸುತ್ತದೆ. ಸಮಸ್ಯೆ ಪರಿಹಾರ, ಪುನರ್ವಸತಿ, ಅಭಿವೃದ್ಧಿ, ಉತ್ತೇಜನ, ಸುಧಾರಣೆ ಮೊದಲಾದ ಅಂಶಗಳಲ್ಲಿ ಪರಿಣತಿ ಸಾಧಿಸಬಹುದು. ಮೇರಿ ರಿಚ್ಮಂಡ್, ಜಾನ್ ಆಯಡಮ್ಸ್, ಸಿಗ್ಮಂಡ್ ಫ್ರಾಯ್ಡ್ ಮೊದಲಾದ ಸಮಾಜ ಕಾರ್ಯ ತಜ್ಞರು ಮತ್ತು ಮನೋವಿಜ್ಞಾನಿಗಳ ಸಿದ್ಧಾಂತಗಳು ಮತ್ತು ಸಂಬಂಧಿಸಿದ ಸಮಾಜ ಶಾಸ್ತ್ರದ ಅಧ್ಯಯನವು ನಿಮ್ಮಲ್ಲಿ ಓದುವ ಹಂಬಲವನ್ನು ಹೆಚ್ಚು ಮಾಡುತ್ತದೆ. ಸೈದ್ಧಾಂತಿಕ ವಿಷಯಗಳ ತರಗತಿಯ ಕಲಿಕೆಯೊಂದಿಗೆ ಕ್ಷೇತ್ರ ಭೇಟಿ (ಫೀಲ್ಡ್ ವರ್ಕ್), ಗ್ರಾಮೀಣ ಶಿಬಿರಗಳಂತಹ ಪ್ರಾಯೋಗಿಕ ಅನುಭವಗಳನ್ನು ಒಳಗೊಂಡಿರುತ್ತದೆ.

ಉದಾಹರಣೆಗೆ ಆಸ್ಪತ್ರೆಯಲ್ಲಿ ಮಾನಸಿಕ ರೋಗಿಗಳ ವಾರ್ಡ್‌ಗೆ ಭೇಟಿ ನೀಡಿ ಅವರ ಆರೈಕೆ, ಚಿಕಿತ್ಸೆ ಮತ್ತು ಪುನರ್‌ವಸತಿಯಲ್ಲಿ ಆಪ್ತ ಸಮಾಲೋಚನೆಯ ಪ್ರಯೋಗ ಮಾಡಿಸಿದಾಗ ಭವಿಷ್ಯದ ವೃತ್ತಿಗೆ ಬೇಕಾದ ಕೌಶಲಗಳಾದ ಅವಲೋಕನ, ವಿಮರ್ಶೆ, ಅಭಿವೃದ್ಧಿಯ ಪರಿಕಲ್ಪನೆ, ಕೇಸ್ ಸ್ಟಡಿ ಮೊದಲಾದವುಗಳನ್ನು ಸಮರ್ಥವಾಗಿ ಬಳಸಿ, ನಿರ್ವಹಿಸುವ ಕಲೆ ಕರಗತವಾಗುತ್ತದೆ.


ಅಗತ್ಯ ಕೌಶಲಗಳು

ಸಮಾಜ ಕಾರ್ಯದಲ್ಲಿ ಅಧ್ಯಯನ ಮಾಡುವವರಿಗೆ ಕೆಲವೊಂದು ಕೌಶಲಗಳ ಅಗತ್ಯವಿದೆ. ಒಳ್ಳೆಯ ಸಂವಹನ ಕಲೆ, ಗ್ರಹಣ ಶಕ್ತಿ, ಬೇರೆಯವರ ಮಾತನ್ನು ಕೇಳಿಸಿಕೊಳ್ಳುವ ತಾಳ್ಮೆ, ಭಾವನಾತ್ಮಕತೆ, ವಿಮರ್ಶಾತ್ಮಕವಾಗಿ ಯೋಚಿಸಿ ನಿರ್ಣಯ ಕೈಗೊಳ್ಳುವ ಗುಣ, ತಾಳ್ಮೆ, ಸೂಕ್ಷ್ಮ ದೃಷ್ಟಿ, ಪ್ರೇರೇಪಿಸುವ ಶಕ್ತಿ, ದೃಢತೆ, ಸಂಘಟಿಸುವ ಸಾಮರ್ಥ್ಯ ಮೊದಲಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಪ್ರಸ್ತುತ ಬಿ.ಎಸ್.ಡಬ್ಲ್ಯೂ. ಮತ್ತು ಎಂ.ಎಸ್.ಡಬ್ಲ್ಯೂ. ಕೋರ್ಸ್‌ಗಳು ಒಟ್ಟು ೨೪ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿವೆ. ಉಳಿದಂತೆ ಎಂ.ಎಸ್.ಡಬ್ಲ್ಯೂ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಲಭ್ಯ.

ಸಮಾಜಕಾರ್ಯ ಕೋರ್ಸ್ ಬಳಿಕ ಮುಂದೇನು?

ಸಮಾಜ ಕಾರ್ಯ ಪದವಿ, ಸ್ನಾತಕೋತ್ತರ ಪದವಿ ಪಡೆದು ಪಿಎಚ್.ಡಿ.ಯನ್ನು ಮಾಡಬಹುದು. ಸಮಾಜ ಕಾರ್ಯ ಶಿಕ್ಷಣದ ನಂತರ ಸಮುದಾಯ ಅಭಿವೃದ್ಧಿ ಅಧಿಕಾರಿ, ಕಾರ್ಮಿಕ ಕಲ್ಯಾಣಾಧಿಕಾರಿ, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ, ಆಸ್ಪತ್ರೆಗಳಲ್ಲಿ, ವೈದ್ಯಕೀಯ, ಮನೋವೈದ್ಯಕೀಯ ಕಾರ್ಯಕರ್ತರು, ಪುನರ್ವವಸತಿ ನಿರ್ದೇಶನಾಧಿಕಾರಿ, ಮಾನವ ಹಕ್ಕು ಮತ್ತು ಸೇವಾ ತಜ್ಞ, ವಿಪತ್ತು ನಿರ್ವಹಣಾಧಿಕಾರಿ, ನೀತಿ ನಿರೂಪಕ, ಮಾದಕ ವ್ಯಸನ ಮುಕ್ತ ಸಮಾಲೋಚಕ, ವಿಶೇಷ ಶಿಶು ಅಭಿವೃದ್ಧಿ ಅಧಿಕಾರಿ, ಶಾಲಾ ಕಾಲೇಜುಗಳಲ್ಲಿ ಪ್ರಾಧ್ಯಾಪಕ, ಸರ್ಕಾರೇತರ ಸಂಸ್ಥೆಗಳಲ್ಲಿ ಉದ್ಯೋಗ.. ಹೀಗೆ ಹಲವಾರು ಕಡೆ ಔದ್ಯೋಗಿಕ ಅವಕಾಶ ಲಭ್ಯ. ಅಲ್ಲದೇ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೂ ಸಮಾಜ ಕಾರ್ಯ ಶಿಕ್ಷಣ ಬೆಂಬಲ ನೀಡುತ್ತದೆ. ಸಿ.ಬಿ.ಎಸ್.ಇ. ಶಾಲೆಗಳಲ್ಲಿ ಆಪ್ತ ಸಮಾಲೋಚಕರ ನೇಮಕವನ್ನು ಕಡ್ಡಾಯಗೊಳಿಸಿರುವುದರಿಂದ ಸಮಾಜ ಕಾರ್ಯ ಅಧ್ಯಯನ ಒಳ್ಳೆಯ ಅವಕಾಶಗಳನ್ನು ತೆರೆದಿದೆ. ಎಲ್ಲಕ್ಕಿಂತ ಮುಖ್ಯವಾಗಿ ವ್ಯಕ್ತಿಯ ಮಾನಸಿಕ ಸಮಸ್ಯೆಗಳಿಗೆ ಸ್ಪಂದಿಸುವ ಸಾಮರ್ಥ್ಯದೊಂದಿಗೆ, ನೊಂದವರ ಮನಸ್ಸನ್ನು ಅರಳಿಸಬಲ್ಲ ಹಾಗೂ ಬೇರೆಯವರನ್ನು ಮಾನಸಿಕವಾಗಿ ಉತ್ತೇಜಿಸಬಲ್ಲ ವಿವಿಧ ಉದ್ಯೋಗಗಳು ಸಾರ್ಥಕತೆಯನ್ನು, ಸಂತೃಪ್ತಿಯನ್ನು ತಂದುಕೊಡುತ್ತವೆ.



ಶಿವನಗೌಡ ಪೊಲೀಸ್ ಪಾಟೀಲ್
ಉಪನ್ಯಾಸಕರು ಸಮಾಜಕಾರ್ಯ ವಿಭಾಗ
ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯ ಕೊಪ್ಪಳ.
೯೮೪೫೬೪೬೩೭೦

# ಮೇ ಅಂತ್ಯಕ್ಕೆ ತುಂಗಭದ್ರಾ ಡ್ಯಾಂ 33 ಕ್ರೆಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣ : ಸಚಿವ ಎನ್.ಎಸ್.ಬೋಸರಾಜು



ವಿಜಯನಗರ (ಹೊಸಪೇಟೆ): ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಶುಕ್ರವಾರ ತುಂಗಭದ್ರಾ ಜಲಾಶಯದ ಮೇಲ್ಭಾಗಕ್ಕೆ ತೆರಳಿ, ತಾಂತ್ರಿಕ ತಂಡವು ನಡೆಸುತ್ತಿರುವ ಜಲಾಶಯದ ಕ್ರೆಸ್ಟ್ ಗೇಟ್ ಅಳವಡಿಕೆ ಕಾರ್ಯಗಳನ್ನು ಖುದ್ದು ವೀಕ್ಷಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರೆಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರೆಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ಒಟ್ಟು 23 ಗೇಟ್‌ಗಳ ಕೆಲಸ ಮುಗಿಯುವ ನಿರೀಕ್ಷೆಯಿದೆ. ಎಕ್ಸ್‌ಪರ್ಟ್ ಟೀಮ್ ಮತ್ತು ಚೀಫ್ ಎಂಜಿನಿಯರ್‌ಗಳ ಪ್ರಕಾರ, ಗೇಟ್ ಬದಲಾವಣೆಯ ಸಮಯದಲ್ಲಿ ಹಳೆಯ ಅಣೆಕಟ್ಟಿನ ರಚನೆಗೆ ಯಾವುದೇ ತೊಂದರೆಯಾಗಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಉಳಿದ 10 ಗೇಟ್‌ಗಳನ್ನು ಅಳವಡಿಸಿ, ಮೇ ಅಂತ್ಯದೊಳಗೆ ಎಲ್ಲಾ 33 ನೂತನ ಕ್ರೆಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳುವ ಭರವಸೆ ಇದೆ. ಕಾಮಗಾರಿಯು ನಿರೀಕ್ಷಿತ ಸಮಯಕ್ಕಿಂತ ವೇಗವಾಗಿ ಸಾಗುತ್ತಿದ್ದು, ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣವಾಗಿ ಸಿದ್ಧವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಸಮಸ್ಯೆಗೆ ಪರಿಹಾರವಾಗಿ 'ನವಲಿ' ಯೋಜನೆಯ ಪ್ರಸ್ತಾವನೆಯನ್ನು ಮಂಡಳಿ ಮತ್ತು ಸಂಬಂಧಿತ ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೊಂದಿಗೂ ಸಹ ಪತ್ರ ವ್ಯವಹಾರ ನಡೆಸಲಾಗಿದೆ. ಸಂಬಂದಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ. ತೆಲಂಗಾಣ ಸರ್ಕಾರದೊಂದಿಗೂ ಸಮನ್ವಯ ಸಾಧಿಸಲು ಪ್ರಯತ್ನಿಸಲಾಗುತ್ತಿದ್ದು, ವಿವಿಧ ತಾಂತ್ರಿಕ ಕಾರಣಗಳಿಂದ ವಿಳಂಬವಾಗು ತ್ತಿದೆ. ಈ ತಾಂತ್ರಿಕ ಸಮಸ್ಯೆಗಳು ಬಗೆಹರಿದ ನಂತರ ಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ. ಈ ಬಗ್ಗೆ ನಮ್ಮ ರಾಜ್ಯದ ವಿವಿಧ ಚುನಾಯಿತ ಪ್ರತಿನಿಧಿಗಳ ನಿಯೋಗವು ನವದೆಹಲಿಯಲ್ಲಿ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಮತ್ತು ವಿವಿಧ ರಾಜ್ಯಗಳ ಸಂಸದರೊಂದಿಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕೇಂದ್ರ ಸಚಿವರು ಮತ್ತು ಅಧಿಕಾರಿಗಳು ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಚುನಾವಣಾ ನೀತಿ ಸಂಹಿತೆಯ ಪ್ರಕ್ರಿಯೆಗಳ ನಂತರ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಕೊಪ್ಪಳ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಟಿಬಿ ಬೋರ್ಡ್ ಹಾಗೂ ಕೆ.ಎನ್.ಎನ್.ಎಲ್. ಅಧಿಕಾರಿಗಳಾದ ಮುಖ್ಯ ಇಂಜಿನಿಯರ್ ಶ್ರೀನಿವಾಸ ಮಲ್ಲಿಗಿವಾಡ, ಎಇಇ ಧರ್ಮರಾಜ್ ಹಾಗೂ ಜ್ಞಾನೇಶ್ವರ, ಸೆಕ್ಷನ್ ಅಧಿಕಾರಿಗಳಾದ ಜಿ. ಕಿರಣ, ಪಂಪಾಪತಿ ಡಿ.ಕೆ. ಮತ್ತು ಹುಲಿರಾಜ್ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ನೀರಾವರಿ ಯೋಜನೆಗಳ ಸಭೆಯಲ್ಲಿ ರಾಜ್ಯಸಭಾ ಸದಸ್ಯರು ಭಾಗಿ



ಬಳ್ಳಾರಿ: ರಾಜ್ಯಸಭಾ ಸದಸ್ಯರಾದ ಡಾ. ಸೈಯದ್ ನಾಸೀರ್ ಹುಸೇನ್ ಅವರು ಕರ್ನಾಟಕ ಭವನದಲ್ಲಿ ನಡೆದ ಮಹತ್ವದ ನೀರಾವರಿ ಯೋಜನೆಗಳ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದರು. ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಿತು.

ಈ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸ್ ರಾಜು, ನವದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಹಾಗೂ ಕಾನೂನು ತಜ್ಞರ ತಂಡ ಭಾಗವಹಿಸಿದ್ದರು.

ಯುಕೆಪಿ–3, ಮೇಕೆದಾಟು ಮತ್ತು ಮಹಾದಾಯಿ ಸೇರಿದಂತೆ ಪ್ರಮುಖ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆಗಳನ್ನು ಪಡೆಯುವ ಬಗ್ಗೆ ಚರ್ಚೆಗಳು ಗಮನಹರಿಸಿದವು. ಈ ಸರ್ವಪಕ್ಷ ನಿಯೋಗವು ಗೌರವಾನ್ವಿತ ಪ್ರಧಾನ ಮಂತ್ರಿ ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಅಗತ್ಯ ಅನುಮೋದನೆಗಳಿಗಾಗಿ ಒತ್ತಾಯಿಸಲು ಸಜ್ಜಾಗಿದ್ದು, ಒಗ್ಗಟ್ಟಿನ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

# ಒಳ ಮೀಸಲಾತಿ ರದ್ದಿಗೆ ಆಗ್ರಹಿಸಿ ಮಾ.24 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

ಬಳ್ಳಾರಿ: ಎಸ್ಸಿ ಒಳ ಮೀಸಲಾತಿಯಲ್ಲಿ ಸಿ.ಕೆಟಗೆರಿಯಿಂದ ಕೊರಚ–ಕೊರಮ, ಲಂಬಾಣಿ, ಭೋವಿ ಸಮಾಜಗಳನ್ನು ಒಳಗೊಂಡ 65 ಜಾತಿಗಳಿಗೆ ತೀವ್ರ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಒಳಮೀಸಲಾತಿ ರದ್ದುಮಾಡಿ ಈ ಹಿಂದಿನ ಮೀಸಲಾತಿಯಂತೆ ನೇಮಕಾತಿ ಮಾಡಬೇಕೆಂದು ಮಾ.24 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ಈ ಕುರಿತು ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಜಿಲ್ಲಾ ಘಟಕ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ತಿಳಿಸಿದೆ. ಎ.ಬಿ.ಸಿ ವರ್ಗೀಕರಣದಲ್ಲಿ ನಡೆಯುವ ನೇಮಕಾತಿಯಿಂದ ನಮ್ಮ ಸಮಾಜಕ್ಕೆ ಮೀಸಲಾತಿ ದೊರೆಯುವುದೇ ದುರ್ಲಬ ಆಗುತ್ತದೆ. ಇತ್ತೀಚೆಗೆ ಧಾರವಾಡ ವಿವಿ. ಅರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರೋಗ್ಯ ಇಲಾಖೆಗಳಲ್ಲಿ ನಡೆಸಲಾದ ನೇಮಕಾತಿಗಳಲ್ಲಿ ಸಿ ಗುಂಪಿಗೆ ಅನ್ಯಾಯ ಆಗಲಿದೆಂದು ಹೇಳಿದಾಗ ಸರ್ಕಾರ ತನ್ನ ನಿರ್ಧಾರ ಬದಲಿಸಿದೆ.

ಒಳ ಮೀಸಲಾತಿಯನ್ನು ಜಾರಿಗೊಳಿಸಲು ರೂಪಿಸಿದ ರೋಸ್ಟರ್ ಕೋಷ್ಟಕ ದೋಷಪೂರ್ಣವಾಗಿದ್ದು, ಅದನ್ನು ರದ್ದು ಮಾಡಿ ಮೂರು ಪ್ರವರ್ಗಗಳಿಗೂ ಸಮಾನವಾಗಿ ನ್ಯಾಯ ಸಿಗುವ ರೀತಿಯಲ್ಲಿ ಪರಿಷ್ಕೃತ ಆದೇಶವನ್ನು ಹೊರಡಿಸಬೇಕು. ಅಲ್ಲಿಯವರೆಗೆ ಎಲ್ಲಾ ಹುದ್ದೆಗಳ ನೇಮಕಾತಿ ಮಾಡಲು ಹಳೆಯ ಮೀಸಲಾತಿಯ ಜಾರಿಗೊಳಿಸಲು ಆಳವಡಿಸಿಕೊಂಡಿದ್ದ ರೊಸ್ಟರ್ ಪದ್ಧತಿಯನ್ನೇ ಮುಂದುವರಿಸಬೇಕು.

ಒಳಮೀಸಲಾತಿ ರದ್ದುಪಡಿಸಿ ಹಿಂದೆ ಇರುವಂತಹ ವ್ಯವಸ್ಥೆಯನ್ನು ಮುಂದುವರೆಸಿ, ನೇಮಕಾತಿಯನ್ನು ಮಾಡಬೇಕು. ಎಬಿಸಿ ವರ್ಗಗಳನ್ನು ರದ್ದುಗೊಳಿಸಿ ಈ ಹಿಂದೆ ಇರುವಂತ ವ್ಯವಸ್ಥೆಯಲ್ಲಿ ನೇಮಕಾತಿಯನ್ನು ಮಾಡಬೇಕು. ಕೇಂದ್ರ ಸರ್ಕಾರ ಜನಗಣತಿಯನ್ನು ಪ್ರಾರಂಭ ಮಾಡಿದೆ. ಜನಗಣತಿ ಸಂಪೂರ್ಣ ಮುಗಿಯುವವರೆಗೂ ಅವೈಜ್ಞಾನಿಕವಾಗಿ ಮಾಡಿದ ಒಳ ಮೀಸಲಾತಿಯನ್ನು ರದ್ದುಪಡಿಸಿ, ಕೇಂದ್ರ ಜನಗಣತಿ ಅಂಕಿ–ಅಂಶಗಳು ಬಂದ ನಂತರ ಸಂಖ್ಯೆಗನುಗುಣವಾಗಿ ಮೀಸಲಾತಿಯ ವಿಂಗಡಣೆ ಮಾಡಿದರೆ ಸಮಾಜಕ್ಕೆ ನ್ಯಾಯ ದೊರಕಿದಂತಾಗುತ್ತದೆ.

ದೇಶವ್ಯಾಪಿ ನಡೆಯಲಿರುವ ಜನಗಣತಿಯ ದತ್ತಾಂಶ ಬರುವವರಿಗೆ ಏಕಪಕ್ಷೀಯ ನಿರ್ಧಾರ ಮಾಡಬಾರದು. ರಾಜ್ಯದಲ್ಲಿ ಒಳ ಮೀಸಲಾತಿ ಹಂಚಿಕೆಯ ಪ್ರಕ್ರಿಯೆ ನಡೆಸುವ ಮುನ್ನ ಸಮುದಾಯಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಬೇಕು. ಶೈಕ್ಷಣಿಕ, ವಸತಿ ನಿಲಯ ಪ್ರವೇಶ,




ನೇಮಕಾತಿಗೆ ರೋಸ್ಟರ್ ಹಂಚಿಕೆ ಮಾಡಿ ಹೊರಡಿಸಿರುವ ಎಲ್ಲಾ ಆದೇಶಗಳನ್ನು, ಸುತ್ತೋಲೆಗಳನ್ನು ಹಿಂಪಡೆಯಬೇಕ ಈಗಾಗಲೇ ಹೊರಡಿಸಿರುವ ವಿವಿಧ ನೇಮಕಾತಿ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಹಳೆಯ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕು ಎಂದು ಆಗ್ರಹಿಸಲಿದೆ.

ಪ್ರತಿಭಟನೆಗೆ ಬಳ್ಳಾರಿ ಜಿಲ್ಲಾ ಕೊಲಂಭೋ ಸಮಾಜದಿಂದ 2 ಸಾವಿರಕ್ಕೂ ಹೆಚ್ಚು ಜನ ತೆರಳಲಿದೆಂದು ಒಕ್ಕೂಟದ ಗೌರವ ಅಧ್ಯಕ್ಷ ಡಾ.ಹನುಂಮತಪ್ಪ, ಅಧ್ಯಕ್ಷ ರಾಮುನಾಯ್ಕ, ಕಾರ್ಯದರ್ಶಿ ಮಹೇಶ್, ಭೋವಿ ಸಮಾಜದ ಜಿಲ್ಲಾ ಅಧ್ಯಕ್ಷ ವಿ.ರಾಮಾಂಜನೇಯಲು, ಲಂಬಾಣಿ ಸಮಾಜದ ಗೋಪಿನಾಯ್ಕ, ಡಾ.ಎಂ.ಟಿ.ಮಲ್ಲೇಶ್, ಪ್ರಕಾಶ್, ಹುಲುಗಪ್ಪ, ಸಂತೋಷ್ ಮೊದಲಾದವರು ಇದ್ದರು.

# ಐದ್ವಾ ಸಂಘಟನೆಯ ತಂಬ್ರಹಳ್ಳಿ ಘಟಕ ಸ್ಥಾಪನೆ



ಬಳ್ಳಾರಿ: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಬಳ್ಳಾರಿ ತಾ ತಂಬ್ರಹಳ್ಳಿ ಗ್ರಾಮದಲ್ಲಿ ಮಹಿಳಾ ಸಂಘಟನೆಯ ಹೊಸಘಟಕವನ್ನು ರಚನೆ ಮಾಡಲಾಯಿತು,

ಈ ಸಭೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಯ ರಾಜ್ಯ ಅದ್ಯಕ್ಷರು ಜೆ ಚಂದ್ರಕುಮಾರಿ ಇವರು ಉದ್ಘಾಟಿಸಿದರು. ಈರಮ್ಮ ಅವರು ಕಾರ್ಯಕ್ರಮ ವನ್ನು ನಿರ್ವಹಣೆಯನ್ನು ಮಾಡಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಐದ್ವಾ) ರಾಷ್ಟಮಟ್ಟದಲ್ಲಿ ಇರುವ ಸಂಘಟನೆ ಯಾಗಿದ್ದು ದೇಶವ್ಯಾಪ್ತಿ ಇರುವ ಮಹಿಳೆಯರು ಹಕ್ಕುಗಳ ಸಾದನೆಗಾಗಿ ಹೋರಾಟಮಾಡುವ ಸಂಘಟನೆ ಯಾಗದೆ, ಈ ಸಂಘಟನೆ ಯಲ್ಲಿ 14 ವರ್ಷ ಮೆಲ್ಪಟ್ಟ ಎಲ್ಲಾ ಮಹಿಳೆಯರು ಸದಸ್ಯರು ಆಗಭಹುದು ಮತ್ತು ಸಮಾಜದಲ್ಲಿ ಮಹಿಳೆಯರು, ಮತ್ತು ಅಪ್ರಾಪ್ತ ಬಾಲಕಿಯರು ಮೇಲೆ ಆಗುವ ಎಲ್ಲಾ ರೀತಿಯ ದೌರ್ಜನ್ಯಗಳು ವಿರುದ್ಧ ಸಂಘಟನೆ ರಾಜೀ ಇಲ್ಲದೆ ಹೋರಾಟ ಮಾಡುವ ಸಂಘಟನೆ ಯೆಂದು ವಿವರಣೆಯನ್ನು ನೀಡಿದ್ದು ಮತ್ತು ಮಹಿಳೆಯರುಗೂ ಎಲ್ಲಾ ರಂಗಗಳಲ್ಲಿ ಸಮಾನತೆಯನ್ನು ಸಾಧನೆ ಮಾಡಲು ನಾವು ಹೋರಾಟ ಮಾಡುವ ಮೂಲಕ ಸಾದ್ಯ ವಾಗುತ್ತೆ ಯಂದು ಕರೆ ನೀಡಿದರು , ಮಹಿಳೆಯರು ಒಗ್ಗಾಟ್ಟಗಿ ಈ ಬಾಗದಲ್ಲಿ ಇರುವ ಮೂಲಭೂತ ಸಮಸ್ಯೆಗಳನ್ನು ಪರಿಹರಿಸು ಕೊಳ್ಳುಳು ತಾವು ಮುಂದಾಗ ಬೇಕು ಯಂದು ಕರೆ ನೀಡಿದರು,

ಗ್ರಾಮ ದಲ್ಲಿ ಕುಡಿಯುವ ನೀರು , ರಸ್ತೆಗಳು, ಒಳಚರಂಡಿ ಮುಂತಾದವು ಮತ್ತು ಕನಿಷ್ಟ ಕೋಲಿಗಾಗಿ ನಿವೇಶನ ರಹಿತ ಕುಟುಂಬ ಗಲಗೆ ನಿವೇಶನಕ್ಕಾಗಿ ಮುಂದಿನ ದಿನಗಳಲ್ಲಿ ಸಂಘಟನೆ ಯಿಂದಾ ಹೋರಾಟ ಗಳು ರೂಪಿಸಿಲು ಸಮಾವೇಶದಲ್ಲಿ ತೀರ್ಮಾನ ಮಾಡಲಾಯುತು. ದಿನನಿತ್ಯ ಅಗುತ್ತಿರುವ ಬೆಲೆಏರಿಕೆ ವಿರುದ್ದ ಈಗ ಅಡಿಗಿ ಗ್ಯಾಸ್ ಸಿಲಿಂಡರ್ ಬೆಲೆ ಎರಿಕೆಯ ವಿರುದ್ದ ಸಂಘಟಿತರಾಗಿ ಹೋರಾಟ ಗಳು ಸರ್ಕಾರ ಬೆಲೆಗಳು ನಿಯಂತ್ರಣ ಮಾಡಲು ಒತ್ತಾಯಿ ಸಬೇಕು ಯಂದು ಹೋರಾಟಗಲಕು ರೂಪಿಸಲು ಕರೆ ನೀಡಿದ್ದಾರೆ.

ಸಮಾವೇಶದ ಕೊನೆಯಲ್ಲಿ 11 ಸದಸ್ಯರ ಸಮಿತಿಯನ್ನು ರಚನೆ ಮಾಡಿದರು.

# ಭಾರತ ಜನಗಣತಿ: ಫೀಲ್ಡ್ ಟ್ರೇನರಗಳಿಗೆ ತರಬೇತಿ ಕಾರ್ಯಾಗಾರ

## ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಸಮರ್ಥ ತರಬೇತಿ ನೀಡಿ– ಡಿಸಿ ಸುರೇಶ್ ಬಿ. ಇಟ್ನಾಳ

ಕೊಪ್ಪಳ: ಜನಗಣತಿ ಕಾರ್ಯಕ್ಕೆ ಗಣತಿದಾರರು ಹಾಗೂ ಮೇಲ್ವಿಚಾರಕರ ಪಾತ್ರ ಮುಖ್ಯವಾಗಿದ್ದು, ಅವರಿಗೆ ಫೀಲ್ಡ್ ಟ್ರೇನರಗಳು ಸಮರ್ಥವಾದ ತರಬೇತಿ ನೀಡಿ, ಕೆಲಸ ಆರಂಭಿಸಬೇಕು ಎಂದು ಜಿಲ್ಲಾಧಿಕಾರಿ ಸುರೇಶ್ ಬಿ. ಇಟ್ನಾಳ ಹೇಳಿದರು.

ಅವರು ಇತ್ತೀಚೆಗೆ ಕೊಪ್ಪಳ ಜಿಲ್ಲಾ ಪಂಚಾಯತ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಭಾರತದ ಜನಗಣತಿ 2027 ಕಾರ್ಯದ ಅಂಗವಾಗಿ ಫೀಲ್ಡ್ ಟ್ರೇನರಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆವಹಿಸಿ ಮಾತನಾಡಿದರು.

ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಿಕೆಯಲ್ಲಿ ಜನಗಣತಿ ಅಂಕಿ–ಅಂಶಗಳು ಅಡಿಪಾಯವಾಗಿದ್ದು, ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳು ರಾಷ್ಟ್ರ ನಿರ್ಮಾಣದ ಅಳಿಲು ಸೇವೆಯಲ್ಲಿ ಭಾಗಿಗಳಾಗುತ್ತಿದ್ದೇವೆ ಎಂಬ ಭಾವನೆಯೊಂದಿಗೆ ಪ್ರಾಮಾಣಿಕವಾಗಿ ಹಾಗೂ ಸಮರ್ಪಕವಾಗಿ ಕೆಲಸ ಮಾಡಬೇಕು. ಈ ಬಾರಿಯ ಜನಗಣತಿಯು ಹಳೆಯ ಮ್ಯಾನುಯಲ್




ಪದ್ಧತಿ ಕೈಬಿಟ್ಟು, ಸಂಪೂರ್ಣವಾಗಿ ಮೊಬೈಲ್ ಅಪ್ ಮೂಲಕ ನಡೆಯಲಿದ್ದು, ಇದು ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಿಸಲಿದೆ. ಪ್ರತಿ ವಾರ್ಡ್ ಅಥವಾ ಗ್ರಾಮ ಮಟ್ಟದಲ್ಲಿ 150 ರಿಂದ 200 ಕುಟುಂಬಗಳನ್ನು ಒಳಗೊಂಡ 'ಬ್ಲಾಕ್'ಗಳನ್ನು ಗುರುತಿಸಿ, ನಿಖರವಾದ ಬ್ಲಾಕ್ ನಕ್ಷೆ ಮತ್ತು ಪಟ್ಟಿಗಳನ್ನು ಸಿದ್ಧಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನಗಣತಿ ಕಾರ್ಯವು ಯಶಸ್ವಿಯಾಗಲು ಬ್ಲಾಗಳ ರಚನೆ ಅತ್ಯಂತ ಪ್ರಮುಖವಾಗಿದೆ. ಬ್ಲಾಕ್ ರಚನೆಯಲ್ಲಿ ಸಣ್ಣ ತಪ್ಪುಗಳಾದರೂ ಇಡೀ ಪ್ರಕ್ರಿಯೆ ಹಳಿ ತಪ್ಪುತ್ತದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರತಿ ಬ್ಲಾಕ್‌ಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡುವ ವಾರ್ಡ್ ಬಿಲ್ ಕಲೆಕ್ಟರ್ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಬೇಕು. ಗಣತಿದಾರರನ್ನು ನೇಮಿಸುವಾಗ ಅವರು ವಾಸಿಸುವ ಅಥವಾ ಕೆಲಸ ಮಾಡುವ ಬ್ಲಾಕ್‌ಗಳಲ್ಲೇ ನಿಯೋಜಿಸಬೇಕು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ಸ್ಥಳೀಯರು ಲಭ್ಯವಿಲ್ಲದಿದ್ದರೆ, 200 ಮೀಟರ್ ವ್ಯಾಪ್ತಿಯಲ್ಲಿರುವ ಸರ್ಕಾರಿ ನೌಕರರನ್ನು ಮಾತ್ರ ಬಳಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾದಿಕಾರಿ ಸಿದ್ರಾಮೇಶ್ವರ, ಜನಗಣತಿ ಕೇಂದ್ರ ಕಚೇರಿ ಬೆಂಗಳೂರಿನ ಮಾಸ್ಟರ್ ಟ್ರೈನರ್ ಫಣಿ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಫೀಲ್ಡ್ ಟ್ರೇನರಗಳಿಗೆ ತರಬೇತಿ: ಜನಗಣತಿ ಕೇಂದ್ರ ಕಚೇರಿ ಬೆಂಗಳೂರಿನ ಮಾಸ್ಟರ್ ಟ್ರೈನರ್ ಫಣಿ ಕುಮಾರ್ ಹಾಗೂ ಯಲಬುರ್ಗಾ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಶಿವಶಂಕರ ಕರಡಕಲ್ ಅವರು ತರಬೇತಿ ನೀಡಿದರು. ಕಾರ್ಯಾಗಾರದಲ್ಲಿ ಮಾಸ್ಟರ್ ಟ್ರೈನರಗಳು, ಫೀಲ್ಡ್ ಟ್ರೇನರಗಳು ಹಾಗೂ ಸಂಬಂಧಿಸಿದ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಸಂಯೋಜಕರಾಗಿ ಆಯ್ಕೆ



**ಬೆಳಗಾವಿ ವಾರ್ತೆ**

**ಚನ್ನಮ್ಮನ ಕಿತ್ತೂರ:** ತಾಲೂಕಿನ ಅವರಾದಿ ಗ್ರಾಮದ ಕಾಂಗ್ರೇಸ್ ಮುಖಂಡ ಉಮೇಶ ಹುಂಬಿಯವರು ಕರ್ನಾಟಕ ಪ್ರದೇಶ ಕಾಂಗ್ರೇಸ್ ಪ್ರಚಾರ ಸಮಿತಿ ಬೆಳಗಾವಿ ಜಿಲ್ಲೆಗೆ ಸಂಯೋಜಕರಾಗಿ ಆಯ್ಕೆಯಾಗಿದ್ದಾರೆ.

# ನಾಶವಾದ ಬೆಳೆಗೆ ರಾಜ್ಯ ಸರ್ಕಾರದಿಂದ ಪರಿಹಾರ: ಸಚಿವ ಎನ್.ಎಸ್. ಭೋಸರಾಜು



ಕೊಪ್ಪಳ: ತುಂಗಭದ್ರಾ ಎಡದಂಡೆ ಕಾಲುವೆಯ ಮೈಲ್ 13ರ ಕಾಲುವೆ ಒಡೆದು ಹೋಗಿರುವ ಪರಿಣಾಮದಿಂದ ನಾಶವಾದ ಬೆಳೆಗೆ ರಾಜ್ಯ ಸರ್ಕಾರದಿಂದ ಪರಿಹಾರ ನೀಡಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕರಾದ ಎನ್. ಎಸ್. ಭೋಸರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ತಾಲ್ಲೂಕಿನ ಬಸಾಪೂರ ಗ್ರಾಮದ ಹತ್ತಿರ ಒಡೆದು ಹೋಗಿರುವ ತುಂಗಭದ್ರಾ ಎಡದಂಡೆ ಕಾಲುವೆಯ ಮೈಲ್ 13ರ ವೀಕ್ಷಣೆ ಮಾಡಿದರು. ನಂತರ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ತುಂಗಭದ್ರಾ ಎಡದಂಡೆ ಕಾಲುವೆಯ ಮೈಲ್ 13ರ ಕಾಲುವೆ ಒಡೆದ ಪರಿಣಾಮವಾಗಿ ಸುಮಾರು 92 ಹೆಕ್ಟೇರ್ 10 ಗುಂಟೆ ಬೆಳೆ ನಾಶವಾಗಿದೆ ಎಂಬ ಮಾಹಿತಿ ಇದೆ. ರೈತರಿಗೆ ತಕ್ಷಣ ಪರಿಹಾರ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ನೀರವಾರಿ ನಿಗಮ ನಿಯಮಿತದಿಂದ (ಕೆ.ಎನ್.ಎನ್.ಎಲ್) ಪ್ರತಿ ಹೆಕ್ಟೇರಿಗೆ ಸರ್ಕಾರವು ನಿಗದಿಪಡಿಸಿದಂತೆ ನಷ್ಟವಾದ ಬೆಳೆಗೆ ಪರಿಹಾರ ಒದಗಿಸಲಾಗುವುದು ಎಂದರು.

ಕೊಪ್ಪಳ ಹಾಗೂ ರಾಯಚೂರಿಗೆ ಕುಡಿಯಲು ನೀರು ಒದಗಿಸಲು ನೀರಾವರಿ ಇಲಾಖೆಯಿಂದ ಆದೇಶ ಬಂದ ಮೇರೆಗೆ ನೀರು ಬಿಡಲಾಗಿತ್ತು. ಸುಮಾರು 2 ಸಾವಿರ ಕ್ಯೂಸೆಕ್ಸ್ ನೀರು ಬಿಡಲಾಗಿತ್ತು. ಈ ಸಂದರ್ಭಗಳಲ್ಲಿ 40 ರಿಂದ 50 ಮೀಟರ್ ಕಾಲವೆ ಬೋಂಗು ಬಿದ್ದು ಒಡೆದು ಹೋಗಿದೆ. ಇಲ್ಲಿನ ಸ್ಥಳೀಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಕಾಲುವೆ ಒಡೆದಿದೆ. ಕಾಲುವೆ ಒಡೆದ ವಿಚಾರವಾಗಿ ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಕೆ.ಎನ್.ಎನ್.ಎಲ್. ಅಧಿಕಾರಿಗಳು ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಬೆಳಗಾವಿಯಲ್ಲಿ ಈದ್-ಉಲ್-ಫಿತರ್ ಸಂಭ್ರಮ

## ಈದ್ಗಾ ಮೈದಾನದಲ್ಲಿ ವಿಶ್ವ ಶಾಂತಿಗಾಗಿ ಸಾಮೂಹಿಕ ನಮಾಜ್ ಅದಾ



**ಬೆಳಗಾವಿ ವಾರ್ತೆ**

**ಬೆಳಗಾವಿ :** ಕುಂದಾನಗರಿ ಬೆಳಗಾವಿಯಲ್ಲಿ ಈದ್ ಉಲ್ ಫಿತರ್ ಹಬ್ಬವನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ನಗರದ ಐತಿಹಾಸಿಕ ಅಂಜುಮನ್ ಎ ಇಸ್ಲಾಂ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಒಂದೆಡೆ ಸೇರಿ ಸಾಮೂಹಿಕ ನಮಾಜ್ ಮಾಡುವ ಮೂಲಕ ಪರಸ್ಪರ ಪ್ರೀತಿ ಮತ್ತು ಸೌಹಾರ್ದತೆಯನ್ನು ಹಂಚಿಕೊಂಡರು.

ರಂಜಾನ್ ಉಪವಾಸದ ನಂತರ ಬರುವ ಈ ಪವಿತ್ರ ಈದ್ ಉಲ್ ಫಿತರ್ ಹಬ್ಬದ ಅಂಗವಾಗಿ ಇಂದು ಬೆಳಿಗ್ಗೆ ಬೆಳಗಾವಿಯ ಈದ್ಗಾ ಮೈದಾನಕ್ಕೆ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಹರಿದು ಬಂದಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಮುಫ್ತಿ ಅಬ್ದುಲ್ ಅಝೀಝ್ ಅವರು 'ಬಯಾನ್' ನೀಡುವ ಮೂಲಕ ಹಬ್ಬದ ಮಹತ್ವ ಹಾಗೂ ಇಸ್ಲಾಂನ ಸಂದೇಶಗಳನ್ನು ಬೋಧಿಸಿದರು. ನಂತರ ನಯೀಮ್ ಖತೀಬ್ ಅವರು 'ಕುತಬಾ' ನೆರವೇರಿಸಿದರು. ಮೈದಾನದಲ್ಲಿ ಸೇರಿದ ಸಾವಿರಾರು ಭಕ್ತರು ಶಿಸ್ತುಬದ್ಧವಾಗಿ ಸಾಲುಗಳಲ್ಲಿ ನಿಂತು ಭಕ್ತಿಯಿಂದ ನಮಾಜ್ ಅದಾ ಮಾಡಿದರು.

ಅಬ್ದುಲ್ ರಝಾಕ್ ಮೋಮಿನ್ ಅವರ ನೇತೃತ್ವದಲ್ಲಿ ಮುಖ್ಯ ಜಮಾತ್ ನಮಾಜ್ ನೆರವೇರಿತು. ಇನ್ನು ಭಕ್ತರ ಸಂಖ್ಯೆ ಅಧಿಕವಾಗಿದ್ದರಿಂದ ಮೌಲಾನಾ ಸಾಜೀದ್ ಅವರ ನೇತೃತ್ವದಲ್ಲಿ ಎರಡನೇ ಜಮಾತ್ ನಮಾಜ್ ವ್ಯವಸ್ಥೆ ಮಾಡಲಾಗಿತ್ತು. ನಮಾಜ್ ನಂತರ ನಡೆದ ವಿಶೇಷ ಪ್ರಾರ್ಥನೆಯಲ್ಲಿ ದೇಶದ ಏಳಿಗೆ ಹಾಗೂ ವಿಶ್ವ ಶಾಂತಿಗಾಗಿ ದೇವನಲ್ಲಿ ಮೊರೆ ಇಡಲಾಯಿತು. ಹಬ್ಬದ ಸಂಭ್ರಮ ಕೇವಲ ಆಚರಣೆಗೆ ಸೀಮಿತವಾಗದೆ, ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆ ನೆಲೆಸಲಿ ಎಂಬ ಆಶಯ ಈ ವೇಳೆ ವ್ಯಕ್ತವಾಯಿತು. ನಮಾಜ್ ಪೂರ್ಣಗೊಂಡ ನಂತರ ಮುಸ್ಲಿಂ ಬಾಂಧವರು ಪರಸ್ಪರ ಆಲಿಂಗಿಸಿಕೊಳ್ಳುವ ಮೂಲಕ ಈದ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಹೊಸ ಬಟ್ಟೆ ತೊಟ್ಟು ಹಬ್ಬದ ಖುಷಿಯಲ್ಲಿ ಪಾಲ್ಗೊಂಡಿದ್ದರು. ಮೈದಾನದ ಸುತ್ತಮುತ್ತ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಒಟ್ಟಾರೆ ಕುಂದಾನಗರಿಯಲ್ಲಿ ಈ ಬಾರಿಯ ರಂಜಾನ್ ಹಬ್ಬ ಭಕ್ತಿ ಮತ್ತು ಸೌಹಾರ್ದತೆಯ ಸಂಗಮದಂತೆ ಕಂಡುಬಂದಿತು.



# ಅದ್ದೂರಿ ಕರಿಯಮ್ಮದೇವಿ ಜಾತ್ರೆ



**ಬೆಳಗಾವಿ**

**ಚನ್ನಮ್ಮನ ಕಿತ್ತೂರು:** ಸಮೀಪದ ಹಿರೇಅಂಗ್ರೋಳ್ಳಿ ಗ್ರಾಮದ ಯುಗಾದಿ ಪಾಡ್ಯ ದಿನದಂದು ಕಮತ್ ಹೊಲದಲ್ಲಿ ನೆಲೆಸಿರುವ ಐತಿಹಾಸಿಕ ಪ್ರಸಿದ್ಧ ಕರಿಯಮ್ಮದೇವಿ ಜಾತ್ರೆ ಹಾಗೂ ಪಲ್ಲಕ್ಕಿ ಉತ್ಸವ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.

ಬೆಳಿಗ್ಗೆ ಅಭಿಷೇಕ, ಮಹಾಪೂಜೆ, ಪ್ರಸಾದ ಇನ್ನಿತರ ಕಾರ್ಯಕ್ರಮಗಳೊಂದಿಗೆ ಪ್ರಾರಂಭವಾದ ಈ ಜಾತ್ರೆ ಸಾಯಂಕಾಲ 6 ಗಂಟೆಯವರೆಗೂ ಜಾತ್ರಾ ಮಹೋತ್ಸವದಲ್ಲಿ ರಾಜ್ಯ, ಜಿಲ್ಲೆ, ತಾಲೂಕು ವಿವಿಧ ಗ್ರಾಮಗಳ ಹಾಗೂ ಸ್ಥಳೀಯ ಗ್ರಾಮಸ್ಥರು ದೇವಿಯ ಕೃಪೆಗೆ ಪಾತ್ರರಾದರು. ದೇವಿ ಆರಾಧಕ ಬಸಪ್ಪ ಬೀಸರೊಳ್ಳಿ ಇವರ ನೇತೃತ್ವದಲ್ಲಿ ಜಾತ್ರೆ ಜರುಗಿತು. ಈ ಹಿಂದೆ ಮುತ್ತಜ್ಜ-ತಂದೆ ಕಾಲದಿಂದಲೂ ಈ ಜಾತ್ರೆ ಮುಂದೆವರೆಸಿಕೊಂಡು ನಡೆದಿದ್ದಾರೆ. ಪಲ್ಲಕ್ಕಿ ಉತ್ಸವ ಗದ್ದುಗೆಯಿಂದ ಪ್ರಾರಂಭವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಂದು ಕೊನೆಗೆ ಸಂಪನ್ನಗೊಂಡಿತು. ರಾತ್ರಿವೇಳೆ ವಿವಿಧ ಗ್ರಾಮಗಳಿಂದ ಆಗಮಿಸಿ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

# ಸಾರ್ವಜನಿಕರ ಗಮನಕ್ಕೆ

ಗದಗ: ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕವನ್ನು ಸ್ಥಾಪಿಸುವ ಕುರಿತು ಹೊರಡಿಸಲಾಗಿದ್ದು ಅದರಲ್ಲಿ ತಾಲ್ಲೂಕ ಹಂತದ ಅಚಿಡಿಜಜಡಿ ಅಂಣಾಟಿ-ಜಟಂಡಿ ಗಳ ಆಯ್ಕೆ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುತ್ತದೆ. ಈ ಕುರಿತಂತೆ ಮುಂದಿನ ಆದೇಶ ಬಂದ ನಂತರ ಕ್ರಮವಹಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜಿ ಎಂ ಮುಂದಿನಮನಿ, ಪ್ರಾಚಾರ್ಯರು ಡಯಟ್ ಗದಗ ಮೊಬೈಲ್ ಸಂ: 9448999369 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಸಡಗರದೊಂದಿಗೆ ರಂಜಾನ ಹಬ್ಬ ಆಚರಣೆ


ಗೋಕಾಕ: ಕಳೆದ ಒಂದು ತಿಂಗಳನಿಂದ ಉಪವಾಸ ಆಚರಿಸುತ್ತಿದ್ದ ಮುಸ್ಲಿಂ ಭಾಂಧವರು ಶನಿವಾರದಂದು ರಮಜಾನ ಹಬ್ಬವನ್ನು ಸಡಗರದೊಂದಿಗೆ ಆಚರಿಸಿ, ಪರಸ್ಪರರು ಶುಭಾಶಯ ವಿನಿಮಯ ಮಾಡಿಕೊಂಡರು.

ನಗರದ ಅಬ್ದುಲ್ ಕಲಾಂ ಕಾಲೇಜಿನ ಈದ್ಗಾ ಮೈದಾನ ಹಾಗೂ ನಗರದ ಇತರ ಮಸೀದಿಗಳಲ್ಲಿ ಶನಿವಾರ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಮುಸ್ಲಿಂ ಸಮುದಾಯದವರು ರಂಜಾನ್ ಹಬ್ಬಕ್ಕೆ ತೆರೆ ಎಳೆದರು.

ಮೌಲಾನಾ ತಲಹಾಸಾಬ ಕಟಹಾರಿ ರಂಜಾನ್ ಆಚರಣೆ ಕುರಿತು ಉಪದೇಶ ನೀಡಿದರು. ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ಒಂದು ತಿಂಗಳು ಉಪವಾಸ ಆಚರಿಸಿದ ಬಳಿಕ ಜಕಾತ್, ಫಿತ್ರಾ ದಾನ ಮಾಡಿದರು.ಈ ವೇಳೆ ಹೊಸ ಬಟ್ಟೆಗಳಲ್ಲಿ, ಸಾಂಪ್ರದಾಯಿಕ ಪೋಷಾಕುಗಳಲ್ಲಿ ಕಂಗೊಳಿಸುತ್ತಿದ್ದ ಮಕ್ಕಳು ಹಬ್ಬದ ಸಂಭ್ರಮ ಹೆಚ್ಚಿಸಿದ್ದರು.

ಈ ಸಂದರ್ಭದಲ್ಲಿ ಅಮೀರಸಾಬ ಹಾಜಿ ಕುತುಬುದ್ದೀನ ಬಸ್ಸಾಪೂರ, ನಗರಸಭೆ ಮಾಜಿ ಸದಸ್ಯರುಗಳಾದ ಅಬ್ಬಾಸ ದೇಸಾಯಿ,ಕುತಬ್ಬುದ್ದೀನ ಗೋಕಾಕ ಸೇರಿದಂತೆ ಸಾವಿರಾರು ಮುಸ್ಲಿಂ ಭಾಂಧವರು ಉಪಸ್ಥಿತರಿದ್ದರು.



ಗೋಕಾಕ : ರಮಜಾನ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಮುಸ್ಲಿಂ ಭಾಂಧವರು.

# ನಿಧನ ವಾರ್ತೆ

ಮೂಡಲಗಿ: ಪಟ್ಟಣದ ಅಂಬೇಡ್ಕರ್ ನಗರದ ಸಾಹಿತಿ ಭಾಸ್ಕರ ಶಾಂತಪ್ಪ ಸಣ್ಣಕ್ಕಿ (97) ಶುಕ್ರವಾರ ಬೆಳಿಗ್ಗೆ ನಿಧನರಾದರು.

ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕಥೆ, ಕಾದಂಬರಿ, ನಾಟಕ ಒಟ್ಟು 11 ಕೃತಿಗಳನ್ನು ರಚಿಸಿದ್ದ ಇವರು 2023ರಲ್ಲಿ ಜರುಗಿದ ಮೂಡಲಗಿ ತಾಲ್ಲೂಕು ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.



ಭಾಸ್ಕರ ಸಣ್ಣಕ್ಕಿ

# ಹುಬ್ಬಳ್ಳಿ ಸಮಾಧಾನದಲ್ಲಿ ಯುಗಾದಿ ಸಂಭ್ರಮ



ಕಲಬುರಗಿ: ಹಿಂದೂಗಳಾದ ನಾವು ಅಲ್ಪಸಂಖ್ಯಾತರಾಗುತ್ತಿದ್ದೇವೆ. ಅಲ್ಪಸಂಖ್ಯಾತರು ಬಹು ಸಂಖ್ಯಾತರಾಗುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ನಾವು ದೇಶದಲ್ಲೇ ಇರುವುದೇ ಕಷ್ಟವಾಗಬಹುದು. ಹೀಗಾಗಿ ನಾವು ಆತ್ಮಾವಲೋಕನ ಮಾಡಿಕೊಳ್ಳುವುದು ಅಗತ್ಯವಾಗಿದೆ. ಹೀಗಾಗಿ ನಾವು ನಾಲ್ಕು ಮಕ್ಕಳಿಗೆ ಜನ್ಮ ನೀಡ್ತೇವೆ ಎಂದು ಶಪಥ ಮಾಡಿ. ತಂದೆತಾಯಿಗೆ ಹಾಗೂ ದೇಶಕ್ಕೆ ಮತ್ತು ಸಮಾಕ್ಕೊಬ್ಬರಂತೆ ಕೊಡುಗೆ ನೀಡಿ ಎಂದು ಮೌನಯೋಗಿ ಜಡೆಯ ಶ್ರೀಗಳು ಮಾರ್ಮಿಕವಾಗಿ ಕರೆ ನೀಡಿದರು.

ಹುಬ್ಬಳ್ಳಿ ಹೊರ ವಲಯದ ಛಬ್ಬಿ ಕ್ರಾಸ್ ಬಳಿ ನಿರ್ಮಾಣಗೊಂಡಿರುವ ನೂತನ ಸಮಾಧಾನದಲ್ಲಿ ಹಮ್ಮಿಕೊಳ್ಳಲಾದ ಯುಗಾದಿ ಸಂಭ್ರಮದ ಸಾನ್ನಿಧ್ಯ ವಹಿಸಿ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಮೊದಲನೇಯದಾಗಿ ಅವರಿಗೆ ಆರೋಗ್ಯದ ಅರಿವು ಮೂಡಿಸಿ, ಅಂದರೆ ಐಸಿಯುಗೆ ಕರೆದುಕೊಂಡು ಹೋಗಿ ರೋಗಿಗಳನ್ನು ನರಳಾಡುತ್ತಿರುವುದನ್ನು ಹಾಗೂ ಸೈನಿಕರನ್ನು ಭೇಟಿಯಾಗಿ ಗಡಿಯಲ್ಲಿ ಪಡುತ್ತಿರುವ ಕಷ್ಟ ಹಾಗೂ ದೇಶಾಭಿಮಾನ ತಿಳಿಸಿ ಹಾಗೆಯೇ ರುದ್ರಭೂಮಿಯಲ್ಲಿ ಹೆಣ ಹೂಳುವುದನ್ನು ತೋರಿಸಿ. ಇದನ್ನು ಅರಿವು ಮಾಡಿಕೊಟ್ಟಾಗ ಎಲ್ಲವೂ ಅವರ ಅರಿವಿಗೆ ಬರುತ್ತದೆ ಎಂದು ಪೂಜ್ಯರು ವಿವರಣೆ ನೀಡಿದರು.

ತಮ್ಮ ಮಕ್ಕಳು ಮಾತೇ ಕೇಳ್ತಾ ಇಲ್ಲ. ಮನೆಯಲ್ಲಿ ಶಾಂತಿ ನೆಮ್ಮದಿಯೇ ಇಲ್ಲವೆಂದು ಅನೇಕ ಭಕ್ತರು ತಮ್ಮ ಎದುರು ನೋವು ತೋಡಿಕೊಂಡಿದ್ದನ್ನು ಅವಲೋಕಿಸುವುದಾದರೆ ಮಕ್ಕಳಿಗೆ ಕೇಳಿದ್ದನ್ನೇ ನೀಡದೇ ವಾಸ್ತವ ಸ್ಥಿತಿ ಮನವರಿಕೆ ಮಾಡಿ ಕೊಡಲು ತಂದೆತಾಯಿ ಮುಂದಾಗಬೇಕೆಂದು ಮಹಾಸ್ವಾಮಿಗಳು ಹೇಳಿದರು.

ಮನೆಯಲ್ಲಿ ತಾಯಿಯಂದಿರುವ ಶಾಂತ ಹಾಗೂ ಸಮಾಧಾನದಿಂದ ಅಡುಗೆ ಮಾಡಿರಿ. ಶುದ್ಧ ಮನಸ್ಸಿನಿಂದ ಅಡುಗೆ ಮಾಡಿದರೆ ಆ ಭಾವ ಅಡುಗೆಯಲ್ಲಿ ಬರುತ್ತದೆ. ಜತೆಗೆ ಊಟವನ್ನು ಟಿವಿ ನೋಡುತ್ತಾ ಹಾಗೂ ಮೊಬೈಲ್ ದಲ್ಲಿ ಊಟ ಮಾಡುತ್ತಾ ಮಾಡಬೇಡಿ. ಪ್ರಮುಖವಾಗಿ ಸಂಸ್ಕಾರಗಳನ್ನು ಮರೆಯಬೇಡಿ ಎಂದು ಪೂಜ್ಯರು ಕಿವಿ ಮಾತು ಹೇಳಿದರು.

ಏಕ ನಿಷ್ಠೆ ಗುರುವಿನ ಶ್ರದ್ಧೆ, ಕಾಯಕ ನಿಷ್ಠೆಯಿಂದ ಬೇಕಾಗಿದ್ದನ್ನು ಪಡೆಯಬಹುದು. ದಿನಾಲು ಬೆಳಗಿನ ಜಾವ ಪೂಜೆ ಮಾಡಿ, ತಾವು ಅಂದಿದ್ದನ್ನು ಸಾಕಾರಗೊಳ್ಳುತ್ತದೆ. ರೊಟ್ಟಿ ಮಾಡಿ ಕೊಡಬಹುದು, ಆದರೆ ಊಟ ಮಾಡುವುದನ್ನು ತಾವೇ ಮಾಡಿಕೊಳ್ಳಬೇಕು. ಸಮಾಜದಲ್ಲಿಂದು ಏನು ನಡೆಯುತ್ತಿದೆ ಎಂಬುದರ ಅರಿವು ಎಲ್ಲರಲ್ಲೂ ಇರಲಿ. ಶರಣರ ತತ್ವಗಳನ್ನು ಅರಿತು ಮುನ್ನೆಡೆದರೆ ಬದುಕಿನಲ್ಲಿ ಅಭಿವೃದ್ಧಿ ಹಾಗೂ ನೆಮ್ಮದಿವಿದೆ ಎಂದು ಪೂಜ್ಯರು ಹೇಳಿದರು.

ಜಡೆ ಹಿರೇಮಠದ ಘನಬಸವ ಅಮರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿದರು.

ಗೊಗ್ಗಹಳ್ಳಿ ಪಂಚಮಮಠದ ಸಂಗಮೇಶ್ವರ ಶಿವಾಚಾರ್ಯರು ಹಾಗೂ ಮೂಡಿಯ ಸದಾಶಿವ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ಪಿ.ಡಿ. ಶಿರೂರ ಪ್ರಾಸ್ತಾವಿಕ ಮಾತನಾಡಿದರು. ಉಷಾ ಹುನಗುಂದ ಪ್ರಾರ್ಥನೆ ಗೀತೆ ಹಾಡಿದರು. ರಾಜಶೇಖರ ಹೊಸಕಟ್ಟಿ ಸ್ವಾಗತಿಸಿದರು.

# ಹಡಲಗೇರಿಯಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುಗೆ; ಗುರುವಂದನೆ



ಮುದ್ದೇಬಿಹಾಳ: ತಾಲೂಕಿನ ಹಡಲಗೇರಿ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಟನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಗುರು ಬಿ ವೈ ನಾಟಿಕರ್ ಅವರು ಈ ಶಾಲೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಈಗ ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುತ್ತಾರೆ . ಅದು ನಮ್ಮ ಹೆಮ್ಮೆ ಕೂಡ ಈಗ ಎಂಟನೆಯ ತರಗತಿಯ ವಿದ್ಯಾರ್ಥಿಗಳನ್ನು ಬಿಳ್ಕೊಡುವ ಕಾರ್ಯಕ್ರಮ ಮತ್ತು ಗುರುವಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಮ್ಮ ಶಾಲೆಯಲ್ಲಿ ಹಲವಾರು ರೀತಿಯ ಸಂಸ್ಕೃತಿಕ ಕಾರ್ಯಕ್ರಮಗಳನ್ನು ಆಗಾಗ್ಗೆ ಮಾಡುತ್ತಲೇ ಬರುತ್ತಿದ್ದೇವೆ. ಎಂದು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಹಳೆಯ ವಿದ್ಯರ್ಥಿಗಳೆಲ್ಲ ಸೇರಿಕೊಂಡು ಗುರುಗಳಿಗೆ ಗುರುವಂದನಾ ಸಲ್ಲಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಡಲಗೇರಿ ಗ್ರಾಮ ಲೆಕ್ಕಾಧಿಕಾರಿ ಹರ್ಷಿತಗೌಡ,ಮತ್ತು ಶಿಕ್ಷಕ ವೃಂದ, ಎಸ್,ಡಿ,ಎಂ,ಸಿ ಅಧ್ಯಕ್ಷ ವಿಠ್ಠಲ್ ಮುದ್ನಾಳ, ಉಪಾಧ್ಯಕ್ಷೆ ನೇತ್ರಾವತಿ ನಾಡಗೌಡ, ಸದಸ್ಯರಾದ ಪರಶುರಾಮ್ ತಳವಾರ, ಅಲ್ಲಾಬಕ್ಷ ಮುಲ್ಲಾ, ಕೃಷ್ಣಗೌಡ ಪಾಟೀಲ, ಗ್ರಾಮ ಪಂಚಾಯ್ತಿ ಸದಸ್ಯರುಗಳು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಕಾಶ್ಮೀರದಂತಾದ ಕಲಘಟಗಿಗೆ ಜಿಲ್ಲಾಧಿಕಾರಿ ಭೇಟಿ

ಧಾರವಾಡ: ಭೀಕರವಾಗಿ ಸುರಿದ ಆಲಿಕಲ್ಲು ಮಳೆಯಿಂದ ಹಾನಿಗೊಳಗಾದ ಕಲಘಟಗಿ ಪಟ್ಟಣ ಸೇರಿದಂತೆ ಮಾಚಾಪೂರ, ಬೆಲವಂತರ ಗ್ರಾಮಗಳಿಗೆ ಮಂಗಳವಾರ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಭೇಟಿ ನೀಡಿ ಪರಿಶೀಲಿಸಿದರು.

ಅವರು ಬೆಲವಂತರ ಹಾಗೂ ಮಾಚಾಪೂರ ಗ್ರಾಮಗಳಿಗೆ ಭೇಟಿ ನೀಡುವುದರ ಜೊತೆಗೆ ಗ್ರಾಮಸ್ಥರೊಂದಿಗೆ ಹಾನಿಗೊಳಗಾದ ಜಮೀನುಗಳಿಗೆ ಹಾಗೂ ರೈತರ ಮನೆಗಳನ್ನು ಭೇಟಿ ನೀಡಿ ವೀಕ್ಷಿಸಿದರು. ಸರಕಾರದ ಗಮನಕ್ಕೆ ತರುವುದಲ್ಲದೆ ಶೀಘ್ರವಾಗಿ ಪರಿಹಾರ ದೊರಕುವಂತೆ ಮಾಡುವುದಾಗಿ ಸಂತ್ರಸ್ತರಿಗೆ ತಿಳಿಸಿದರು. **ಶಿಕ್ಷಕಿಯಾದ ಜಿಲ್ಲಾಧಿಕಾರಿ:** ತಮ್ಮ ಬಹು ಆಸೆಯ ವೃತ್ತಿಯಾದ ಶಿಕ್ಷಕ ವೃತ್ತಿಯನ್ನು ಜಿಲ್ಲಾಧಿಕಾರಿಗಳು ತಾಲೂಕಿನ ಬೀರವಳ್ಳಿ ಗ್ರಾಮದ ಪಿ.ಎಂ. ಶ್ರೀ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳೊಂದಿಗೆ ಹಿಂದಿ ವಿಷಯವನ್ನು ಭೋದಿಸುವುದರೊಂದಿಗೆ ಕಾಲ ಕಳೆದರು. ಮಕಳಿಂದ ಭವಿಷ್ಯತ್ತಿನಲ್ಲಿ ತಾವು ಸಾಧಿಸಬಹುದಾದ ಗುರಿಯ ಬಗ್ಗೆ ಚರ್ಚಿಸಿ ಶಾಲೆಯಲ್ಲಿ ಇರಬಹುದಾದ ಮೂಲಭೂತ ಸೌಕರ್ಯಗಳನ್ನು ವೀಕ್ಷಿಸಿದರು.



# ಮಾ.24 ರಂದು ಡಾ. ಬಾಬು ಜಗಜೀವನ ರಾಂ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ಧಾರವಾಡ: ಭಾರತ ರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆಯನ್ನು ಹಾಗೂ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆಯನ್ನು ಆಚರಿಸುವ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯನ್ನು ಮಾರ್ಚ್ 24, 2026 ರಂದು ಬೆಳಿಗ್ಗೆ 10:30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ನೂತನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಭೆಗೆ ವಿವಿಧ ಸಂಘ ಸಂಸ್ಥೆಗಳು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮುಖಂಡರು ಹಾಗೂ ಜಿಲ್ಲಾಮಟ್ಟದ ಎಲ್ಲ ಅಧಿಕಾರಿಗಳು ಹಾಜರಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001